ಸಂಪುಟ 01 | ಸಂಚಿಕೆ 141 | ಶುಕ್ರವಾರ 10 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ರಾಷ್ಟ್ರೀಯ ಒಡಹುಟ್ಟಿದವರ ದಿನ**

ರಾಷ್ಟ್ರೀಯ ಒಡಹುಟ್ಟಿದವರ ದಿನವನ್ನು (National Siblings Day) ಪ್ರತಿ ವರ್ಷ ಏಪ್ರಿಲ್ 10 ರಂದು ಆಚರಿಸಲಾಗುತ್ತದೆ, ಇದು ಸಹೋದರ-ಸಹೋದರಿಯರ ನಡುವಿನ ವಿಶಿಷ್ಟ ಬಾಂಧವ್ಯವನ್ನು ಗೌರವಿಸುವ ಮತ್ತು ಪ್ರೀತಿಯನ್ನು ವ್ಯಕ್ತಪಡಿಸುವ ದಿನವಾಗಿದೆ. ಕ್ಲೌಡಿಯಾ ಇವರ್ಟ್ ಅವರಿಂದ 1995 ರಲ್ಲಿ ಸ್ಥಾಪಿತವಾದ ಈ ದಿನವು, ಕುಟುಂಬದ ಬಂಧಗಳನ್ನು ಗಟ್ಟಿಗೊಳಿಸಲು ಮತ್ತು ಹಳೆಯ ನೆನಪುಗಳನ್ನು ಹಂಚಿಕೊಳ್ಳಲು ಒಂದು ಅವಕಾಶವಾಗಿದೆ.

## ಸುಭಾಷಿತ

ಸತ್ಯಕ್ಕಾಗಿ ಯಾವುದನ್ನಾದರೂ ತ್ಯಾಗ ಮಾಡಿ. ಆದರೆ, ಸತ್ಯವನ್ನು ಮಾತ್ರ ತ್ಯಾಗ ಮಾಡಬೇಡಿ.

-ಸ್ವಾಮಿ ವಿವೇಕಾನಂದ

## ಪ್ರಾಚಾರ್ಯ ಕಿಶೋರಕುಮಾರಗೆ ಸನ್ಮಾನ

**ನೈಜ್ಯ ದೆಸೆ ನ್ಯೂಸ್**

ತಾಳಿಕೋಟಿ: ಪಟ್ಟಣದ ಪ್ರತಿಷ್ಠಿತ ವಿವಿ ಸಂಘದ ಅಡಿಯಲ್ಲಿ ನಡೆಯುತ್ತಿರುವ ಎಸ್ ಕೆ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಕಿಶೋರಕುಮಾರ ಇವರನ್ನು ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಗುರುವಾರ ಎನ್‌ಎಸ್‌ಎಸ್ ವಿಭಾಗದಿಂದ ಆಶ್ರಯ ಕಾಲೋನಿಯಲ್ಲಿ ಹಮ್ಮಿಕೊಂಡ ವಿಶೇಷ ತರಬೇತಿ ಶಿಬಿರದಲ್ಲಿ ಅವರಿಗೆ ಈ ಸನ್ಮಾನ ನೀಡಲಾಯಿತು.



ವಿ.ವಿ.ಸಂಘದ ಅಧ್ಯಕ್ಷ ವಿ.ಸಿ.ಹಿರೇಮಠ, ಎಸ್‌ಕೆ ಶಿಕ್ಷಣ ಮಹಾವಿದ್ಯಾಲಯದ ಅಧ್ಯಕ್ಷ ಕಾಶಿನಾಥ ಮುರಾಳ, ಸಂಘದ ಕಾರ್ಯದರ್ಶಿ ಎಂ ಎಸ್ ಸರಶೆಟ್ಟಿ, ನಿರ್ದೇಶಕ ಕಾಶಿನಾಥ ಸಜ್ಜನ, ಪ್ರಾಚಾರ್ಯ ಆರ್ ಎಂ ಬಂಟನೂರ, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಎ.ಎ. ಗಂಗನಗೌಡರ ಹಾಗೂ ಪ್ರಶಿಕ್ಷಣಾರ್ಥಿಗಳು ಇದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಕೇರಳದಲ್ಲಿ ಸರದಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದ ಗಣ್ಯರು

ತಿರುವನಂತಪುರಂಳ: ಕೇರಳದಾದ್ಯಂತ ಮತದಾನ ಪ್ರಕ್ರಿಯೆ ಚುರುಕುಗೊಂಡಿದೆ. ಆರಂಭದಲ್ಲೇ ಪ್ರಮುಖ ವ್ಯಕ್ತಿಗಳು ಮತ್ತು ಅಭ್ಯರ್ಥಿಗಳು ಮತಗಟ್ಟೆಗಳಿಗೆ ತಲುಪಿ ತಮ ಹಕ್ಕು ಚಲಾಯಿಸಿದ್ದಾರೆ. ರಾಜ್ಯದಲ್ಲಿ ಹೊಸ ಸರ್ಕಾರವನ್ನು ಆಯ್ಕೆ ಮಾಡಲು 2.71 ಕೋಟಿಗೂ ಹೆಚ್ಚು ಮತದಾರರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಲಿದ್ದಾರೆ.ಮುಖ್ಯಮಂತ್ರಿ ಪಿಣರಾಯಿ ವಿಜಯನ್, ತಮ್ಮ ಪತ್ನಿ, ಮಗಳು ಮತ್ತು ಮಗನೊಂದಿಗೆ ಬೆಳಿಗ್ಗೆ 8 ಗಂಟೆ ಸುಮಾರಿಗೆ ಕಣ್ಣೂರು ಜಿಲ್ಲೆಯ ಪಿಣರಾಯಿಯಲ್ಲಿರುವ ಆರ್‌ಸಿ ಅಮಲ ಬೇಸಿಕ್ ಯುಪಿ ಶಾಲೆಯ ಮತಗಟ್ಟೆಗೆ ನಡೆದುಕೊಂಡು ಹೋದರು.ಅವರೊಂದಿಗೆ ಪಕ್ಷದ ನಾಯಕರೂ ಇದ್ದರು.

ಚುನಾವಣೆ ನಿರ್ಣಾಯಕ ಎಂದು ಬಣ್ಣಿಸಿದ ವಿಜಯನ್, ರಾಜ್ಯವು ಅಭಿವೃದ್ಧಿ ಹೊಂದಿದ ರಾಜ್ಯವಾಗುವತ್ತ ಸಾಗುತ್ತಿರುವುದರಿಂದ ಇದು ಕೇರಳದ ಭವಿಷ್ಯವನ್ನು ನಿರ್ಧರಿಸುತ್ತದೆ ಎಂದು ಹೇಳಿದರು.ನಾವು ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗಿದೆ ಮತ್ತು ಅದು ಮುಂದುವರಿಯಬೇಕು. ಅದನ್ನು ಅಡ್ಡಿಪಡಿಸಬಾರದು ಮತ್ತು ಜನರು ಅದರ ಮುಂದುವರಿಕೆಯನ್ನು ಬಯಸುತ್ತಾರೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು. ಎಲ್‌ಡಿಎಫ್ ಅನ್ನು ವಿರೋಧಿಸುವವರು ಸೇರಿದಂತೆ ರಾಜ್ಯಾದ್ಯಂತ ಜನರು ಕೇರಳದ ಅಭಿವೃದ್ಧಿಯಲ್ಲಿ ಆಸಕ್ತಿ ಹೊಂದಿದ್ದಾರೆ ಮತ್ತು ಎಡರಂಗ ಮಾತ್ರ ರಾಜ್ಯವನ್ನು ಸಮರ್ಪಿತ ರೀತಿಯಲ್ಲಿ ಮುಂದಕ್ಕೆ ಕೊಂಡೊಯ್ಯಬಹುದು ಎಂದು ನಂಬುತ್ತಾರೆ ಎಂದು ಅವರು ಹೇಳಿದರು.

ನಮ್ಮಲ್ಲಿ ಭ್ರಷ್ಟಾಚಾರ ಕಡಿಮೆ ಇದೆ, ಮತ್ತು ಬೇರೆ ಯಾವುದೇ ರಂಗ ಇದನ್ನು ಸಾಧಿಸಲು ಸಾಧ್ಯವಿಲ್ಲ ಎಂದು ಜನರಿಗೆ ತಿಳಿದಿದೆ. ಕಳೆದ 10 ವರ್ಷಗಳಲ್ಲಿ ವ್ಯಾಪಕ ಅಭಿವೃದ್ಧಿ ಕಂಡುಬಂದಿದೆ ಮತ್ತು ಎಲ್‌ಡಿಎಫ್ ಇದರ ಹಿಂದೆ ಇತ್ತು. ಈ ಅಭಿವೃದ್ಧಿ ಮುಂದುವರಿಯಬೇಕಾದರೆ ಎಲ್‌ಡಿಎಫ್ ಅಧಿಕಾರದಲ್ಲಿ ಉಳಿಯಬೇಕು ಎಂದು ಜನರು ಬಲವಾಗಿ ನಂಬುತ್ತಾರೆ ಎಂದು ಅವರು ಹೇಳಿದರು.





ವಿರೋಧ ಪಕ್ಷದ ನಾಯಕ ವಿ ಡಿ ಸತೀಶನ್ ತಮ್ಮ ಪತ್ನಿ ಮತ್ತು ಮಗಳೊಂದಿಗೆ ಕೇಸರಿ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿಗೆ ಆಗಮಿಸಿ ಮತ ಚಲಾಯಿಸಿದರು.ಎಲ್ಲರೂ ತಮ್ಮ ಮತಗಳನ್ನು ಚಲಾಯಿಸಬೇಕು. ಇದು ಪ್ರಜಾಪ್ರಭುತ್ವ ಪ್ರಕ್ರಿಯೆಯ ಭಾಗವಾಗಿದೆ. ಹೆಚ್ಚಿನ ಜನರು ಮತಗಟ್ಟೆಗಳಿಗೆ ಬಂದಾಗ ಅದು ಪ್ರಜಾಪ್ರಭುತ್ವದ ವಿಜಯವಾಗಿದೆ ಎಂದು ಅವರು ಮಾಧ್ಯಮಗಳಿಗೆ ತಿಳಿಸಿದರು.

ಯುಡಿಎಫ್ 100 ಸ್ಥಾನಗಳನ್ನು ಗೆಲ್ಲುತ್ತದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು. ಚುನಾವಣಾ ಪೂರ್ವ ಭವಿಷ್ಯವಾಣಿಗಳಲ್ಲಿ ತೋರಿಸಿರುವಂತೆ ಸ್ಪಷ್ಟವಾದ ಮುನ್ನಡೆ ಇದೆ. ಪುದುಯುಗ ಯಾತ್ರೆಯ ಭಾಗವಾಗಿ ನಾನು ಕೇರಳದಾದ್ಯಂತ ಪ್ರಯಾಣಿಸಿದ್ದೇನೆ ಮತ್ತು ಬದಲಾವಣೆಗಾಗಿ ಬಲವಾದ ಅಲೆ ಇದೆ ಎಂದು ಅವರು ಹೇಳಿದರು. ಹಲವಾರು ಚುನಾವಣಾ ಸಿಬ್ಬಂದಿ ತಮ್ಮ ಅಂಚೆ ಮತಗಳನ್ನು ಚಲಾಯಿಸಲು ಸಾಧ್ಯವಾಗುತ್ತಿಲ್ಲ ಎಂದು ಆರೋಪಿಸಿ ಅವರು ಚುನಾವಣಾ ಆಯೋಗವನ್ನು ಹೆಚ್ಚು ಜಾಗರೂಕರಾಗಿರಲು ಒತ್ತಾಯಿಸಿದರು.

ಕೇಂದ್ರ ಸಚಿವ ಸುರೇಶ್ ಗೋಪಿ ಬೆಳಿಗ್ಗೆ 6.30 ಕ್ಕೆ ಗುರುವಾಯೂರಿನ ದೇವಸ್ವಂ ಇಂಗ್ಲಿಷ್ ಮಾಧ್ಯಮ ಶಾಲೆಯ ಮತಗಟ್ಟೆಗೆ ತಲುಪಿ ಸರದಿಯಲ್ಲಿ ಕಾಯುತ್ತಿದ್ದರು.ಭಕ್ತಿಯಿಂದ ನಾನು ಮತ ಚಲಾಯಿಸಿದ್ದೇನೆ. ಇಲ್ಲಿ ಮತ ಚಲಾಯಿಸಿದ್ದಕ್ಕಾಗಿ ಗುರುವಾಯೂರಪ್ಪನ್ (ಗುರುವಾಯೂರು ದೇವಸ್ಥಾನದ ಶ್ರೀಕೃಷ್ಣ) ಅವರಿಗೆ ನಾನು ಧನ್ಯವಾದ ಹೇಳುತ್ತೇನೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಈ ಬಾರಿ ಬದಲಾವಣೆಯಾಗಲಿದೆ ಎಂದು ಗೋಪಿ ಹೇಳಿದರು.ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಮತ ಚಲಾಯಿಸಿದ ನಂತರ, ಕೇರಳದಲ್ಲಿ ಅಭಿವೃದ್ಧಿ ತರಲು ಪಕ್ಷವು ಮತದಾರರಿಂದ ಅವಕಾಶವನ್ನು ಬಯಸುತ್ತಿದೆ ಎಂದು ಹೇಳಿದರು. ಇದು ನಿರ್ಣಾಯಕ ಚುನಾವಣೆ ಎಂದು ಜನರು ಅರಿತುಕೊಂಡಿದ್ದಾರೆ. ಅವರು ಬದಲಾವಣೆ ತರುತ್ತಾರೆ ಎಂಬ ವಿಶ್ವಾಸ ನನಗಿದೆ ಎಂದು ಅವರು ಹೇಳಿದರು. ಕೇರಳ ವಿಧಾನಸಭೆಯಲ್ಲಿ ಗದ್ದಲ ಸೃಷ್ಟಿಸಲು ಅಲ್ಲ, ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಬಿಜೆಪಿ ಮತ ಕೇಳುತ್ತಿದೆ ಎಂದು ಚಂದ್ರಶೇಖರ್ ಹೇಳಿದರು.

ಸಿಪಿಐ(ಎಂ) ಅಥವಾ ಕಾಂಗ್ರೆಸ್ ಸ್ಪಷ್ಟ ಜನಾದೇಶವನ್ನು ಪಡೆಯುವುದಿಲ್ಲ ಎಂದು ನನಗೆ ಸಂಪೂರ್ಣ ವಿಶ್ವಾಸವಿದೆ. ಬಿಜೆಪಿ ಪ್ರಮುಖ ಶಕ್ತಿಯಾಗಿ ಹೊರಹೊಮ್ಮುತ್ತದೆ ಮತ್ತು ಚುನಾವಣೆಯ ನಂತರ ಜನರು ಪಕ್ಷಕ್ಕೆ ಅಂತಹ ಪಾತ್ರವನ್ನು ನೀಡುತ್ತಾರೆ ಎಂದು ಅವರು ಹೇಳಿದರು. ನಟ ಮೋಹನ್ ಲಾಲ್ ತಿರುವನಂತಪುರಂನ ಮುದವನ್‌ಮುಘಲ್ ಸರ್ಕಾರಿ ಶಾಲೆಯ ಹೊರಗೆ ಮತ ಚಲಾಯಿಸಿದರು. ಐಯುಎಂ-ಎಲ್ ನಾಯಕರಾದ ಪಿ.ಕೆ. ಕುನ್ಹಾಲಿಕುಟ್ಟಿ ಮತ್ತು ಸಯ್ಯದ್ ಸಾದಿಕಲಿ ಶಿಹಾಬ್ ತಂಗಲ್ ಕೂಡ ಬೆಳಿಗ್ಗೆ ಮಲಪ್ಪುರಂನಲ್ಲಿ ಮತ ಚಲಾಯಿಸಿದರು. ಕುನ್ಹಾಲಿಕುಟ್ಟಿ ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದರು. ಕೆಪಿಸಿಸಿ ಅಧ್ಯಕ್ಷ ಸನ್ನಿ ಜೋಸೆಫ್ ಕಣ್ಣೂರಿನ ಪೆರವೂರಿನ ಕಡತುಂಕಡ್ವುವಿನ ಸೇಂಟ್ ಜಾನ್ ಬ್ಯಾಪ್ಟಿಸ್ಟ್ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆಯಲ್ಲಿ ಮತ ಚಲಾಯಿಸಿದರು. ಸಿಪಿಐ(ಎಂ) ನಾಯಕಿ ಕೆ.ಕೆ. ಶೈಲಜಾ ಅವರ ಎದುರಾಳಿಯಾಗಿದ್ದರೂ ಅವರು ತಮ್ಮ ಸ್ಥಾನವನ್ನು ಉಳಿಸಿಕೊಳ್ಳುವ ವಿಶ್ವಾಸ ವ್ಯಕ್ತಪಡಿಸಿದರು.

ಕಳೆದ ಚುನಾವಣೆಯಲ್ಲಿಯೂ ಜನರು ನನ್ನ ಸೋಲನ್ನು ಊಹಿಸಿದ್ದರು, ಆದರೆ ನಾನು ವಿಜಯಶಾಲಿಯಾದೆ. ನನ್ನ ಭವಿಷ್ಯವಾಣಿಗಳು ತಪ್ಪಾಗಿಲ್ಲ ಎಂದು ಅವರು ಹೇಳಿದರು. ಎನ್‌ಎಸ್‌ಎಸ್ ಪ್ರಧಾನ ಕಾರ್ಯದರ್ಶಿ ಜಿ. ಸುಕುಮಾರನ್ ನಾಯರ್ ಕೊಟ್ಟಾಯಂನ ಚಂಗನಶ್ಶೇರಿಯ ವಝುಪಲ್ಲಿ ಶಾಲೆಯಲ್ಲಿ ಮತ ಚಲಾಯಿಸಿದರು.ಗೆದ್ದವರು ಸರ್ಕಾರ ರಚಿಸಲಿ. ಜನರು ಒಂದು ನಿಲುವು ತೆಗೆದುಕೊಳ್ಳಬೇಕು ಎಂದು ಅವರು ಹೇಳಿದರು.ಕೇಂದ್ರ ಸಚಿವ ಮತ್ತು ಕಂಜಿರಪ್ಪಳ್ಳಿ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಜಾರ್ಜ್ ಕುರಿಯನ್, ಎಟ್ಟುಮನ್ನೂರಿನ ಕಣಕ್ಕರಿ ಸರ್ಕಾರಿ ವೃತ್ತಿಪರ ಪ್ರೌಢಶಾಲೆಯಲ್ಲಿ ಮತ ಚಲಾಯಿಸಿದರು.

# ದ್ವಿತೀಯ ಪಿಯುಸಿ ಫಲಿತಾಂಶ : ರಾಜ್ಯದಲ್ಲಿ 31ನೇ ಸ್ಥಾನ ಪಡೆದ ರಾಯಚೂರು ಜಿಲ್ಲೆ 74.11% ಫಲಿತಾಂಶ

**ನೈಜ್ಯ ದೆಸೆ ನ್ಯೂಸ್**

ರಾಯಚೂರು: 2026ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ರಾಯಚೂರು ಜಿಲ್ಲೆ ರಾಜ್ಯ ಮಟ್ಟದಲ್ಲಿ 31ನೇ ಸ್ಥಾನ ಪಡೆದು ಗಮನಾರ್ಹ ಸಾಧನೆ ಮಾಡಿದೆ. ಜಿಲ್ಲೆಯ ಒಟ್ಟು ಫಲಿತಾಂಶ 74.11% ದಾಖಲಾಗಿದ್ದು, ಕಳೆದ ವರ್ಷಕ್ಕಿಂತ ಮಹತ್ವದ ಏರಿಕೆ ಕಂಡುಬಂದಿದೆ. 2025ನೇ ಸಾಲಿನಲ್ಲಿ ಜಿಲ್ಲೆಯ ಫಲಿತಾಂಶ 58.78% ಮಾತ್ರ ಇದ್ದು, ಈ ಬಾರಿ ಸುಮಾರು 16% ಹೆಚ್ಚಳ ಕಂಡು ಜಿಲ್ಲೆಯ ಶಿಕ್ಷಣ ಕ್ಷೇತ್ರದಲ್ಲಿ ಪ್ರಗತಿ ಸಾಧನೆಯಾಗಿದೆ.

ಫಲಿತಾಂಶ ಏರಿಕೆಗೆ ಕಾರಣ ಶಿಕ್ಷಕರ ಸಮರ್ಪಿತ ಬೋಧನೆ, ವಿದ್ಯಾರ್ಥಿಗಳ ನಿರಂತರ ಪರಿಶ್ರಮ, ಪೋಷಕರ ಪ್ರೋತ್ಸಾಹ ಹಾಗೂ ಶಿಕ್ಷಣ ಇಲಾಖೆಯ ಮೇಲ್ವಿಚಾರಣೆ ಫಲವಾಗಿ ಈ ಬಾರಿ ಉತ್ತಮ ಫಲಿತಾಂಶ ಸಾಧ್ಯವಾಗಿದೆ ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಜಿಲ್ಲೆಯ ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳ ಸಮನ್ವಯ ಕಾರ್ಯ, ವಿಶೇಷ ತರಬೇತಿ ತರಗತಿಗಳು ಹಾಗೂ ಪರೀಕ್ಷಾ ಪೂರ್ವ ಮಾರ್ಗದರ್ಶನ ಕಾರ್ಯಕ್ರಮಗಳು ಸಹ ಫಲಿತಾಂಶ ಸುಧಾರಣೆಗೆ ಕಾರಣವಾಗಿವೆ.

ಜಿಲ್ಲೆಯ ಎಲ್ಲಾ ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ತಿಳಿಸುತ್ತಾ, ಮುಂದಿನ ವರ್ಷಗಳಲ್ಲಿ ರಾಜ್ಯದ ಮೊದಲ ಹತ್ತು ಸ್ಥಾನಗಳೊಳಗೆ ಜಿಲ್ಲೆಯು ಸ್ಥಾನ ಪಡೆಯುವ ವಿಶ್ವಾಸ ವ್ಯಕ್ತವಾಗಿದೆ. ಉಪ ನಿರ್ದೇಶಕರಾದ ಸೋಮಶೇಖರ್ ವಕ್ರಾಣಿ ಅವರು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

### ವಿಜ್ಞಾನ ವಿಭಾಗ

ವಿಜ್ಞಾನ ವಿಭಾಗದಲ್ಲಿ ಸಾಧನೆ
ವಿಜ್ಞಾನ ವಿಭಾಗದಲ್ಲಿ ಜಿಲ್ಲೆಯ ಪ್ರಥಮ



ಸ್ಥಾನವನ್ನು ಕುಮಾರಿ ರೇಖಾ 591/600 ಅಂಕಗಳು ಎಸ್. ಕೆ.ಎಂ ಪಿಯು ಕಾಲೇಜು, ದೇವದುರ್ಗ ವಿದ್ಯಾರ್ಥಿನಿ ಪಡೆದು ಜಿಲ್ಲೆಯ ಕೀರ್ತಿ ಹೆಚ್ಚಿಸಿದ್ದಾರೆ.

### ಕಲಾ ವಿಭಾಗ



ಕಲಾ ವಿಭಾಗದಲ್ಲಿ ದುರ್ಗ ಭವಾನಿ (ತಂದೆ: ಬಸವರಾಜ್) 593/600 ಅಂಕಗಳು ಆಕ್ಸ್‌ಫರ್ಡ್ ಪದವಿಪೂರ್ವ ಕಾಲೇಜು, ಸಿಂಧನೂರು ವಿದ್ಯಾರ್ಥಿನಿ ಜಿಲ್ಲೆಯ ಪ್ರಥಮ ಸ್ಥಾನ ಪಡೆದಿದ್ದಾರೆ. ರಾಜ್ಯಕ್ಕೆ ನಾಲ್ಕನೇ ಸ್ಥಾನ

### ವಾಣಿಜ್ಯ ವಿಭಾಗ



594/600 ನಯನ ಎ.ವಿ. ಎಸ್ ಬ್ರಿಲಿಯಂಟ್ ಪಿಯು ಕಾಲೇಜು, ಸಿಂಧನೂರು ಈ ವಿದ್ಯಾರ್ಥಿಗಳ ಸಾಧನೆ ಜಿಲ್ಲೆಯ ಶಿಕ್ಷಣ ಮಟ್ಟವನ್ನು ಮತ್ತಷ್ಟು ಎತ್ತಿ ಹಿಡಿದಿದೆ. ರಾಯಚೂರು ಜಿಲ್ಲೆಗೆ ಪ್ರಥಮ ಸ್ಥಾನ

### ವಾಣಿಜ್ಯ ವಿಭಾಗ



ವಾಣಿಜ್ಯ ವಿಭಾಗದಲ್ಲಿ ಭರ್ಜರಿ ಸಾಧನೆ
594/600 ಅಂಕಗಳು ಪಡೆದು ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಹಂಚಿಕೊಂಡಿದ್ದಾರೆ.
ಭಕ್ತಿ. ಪಾಟೀಲ್ ಪಿಯು ಕಾಲೇಜು, ಸಿಂಧನೂರು ರಾಯಚೂರು ಜಿಲ್ಲೆಗೆ ಪ್ರಥಮ ಸ್ಥಾನ

### ವಾಣಿಜ್ಯ ವಿಭಾಗ



ವಿಕಾಸ್ ತಂದೆ ಹನುಮಂತ 594/600 ವಾಣಿಜ್ಯ ವಿಭಾಗದಲ್ಲಿ ರಾಯಚೂರು ಜಿಲ್ಲೆಗೆ ಪ್ರಥಮ ಸ್ಥಾನ, ವಿದ್ಯಾನಿಧಿ ಪಿಯು ಕಾಲೇಜ್ ರಾಯಚೂರು

### ಜಿಲ್ಲೆಯ ದ್ವಿತೀಯ ಪಿಯುಸಿ ಫಲಿತಾಂಶ ತೃಪ್ತಿಕರ..



ಇಂದು ದಿನಾಂಕ ಎ 9 ರಂದು ಪ್ರಕಟವಾದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ-1ರ ನಮ್ಮ ಜಿಲ್ಲೆಯ ಫಲಿತಾಂಶ ಶೇ.74.11% ರಷ್ಟು ಬಂದಿದ್ದು, ಹೋದ ವರ್ಷಕ್ಕಿಂತ 16.15% ರಷ್ಟು ಫಲಿತಾಂಶ ಹೆಚ್ಚಳವಾಗಿದೆ (ಹೋದ ವರ್ಷ 58.75%). ಈ ವರ್ಷ ನಮ್ಮ ಜಿಲ್ಲೆ 31ನೇ ಸ್ಥಾನದಲ್ಲಿದ್ದು, 16.15% ರಷ್ಟು ಫಲಿತಾಂಶ ಹೆಚ್ಚಳ ನಮ್ಮೆಲ್ಲರಿಗೂ ತೃಪ್ತಿದಾಯಕ ಫಲಿತಾಂಶ ವಾಗಿದ್ದು, ಇದಕ್ಕಾಗಿ ಅವಿರತವಾಗಿ ಶ್ರಮಿಸಿದ ನಮ್ಮೆಲ್ಲ ಆತ್ಮೀಯ ಪ್ರಾಂಶುಪಾಲರು ಮಿತ್ರರು, ಉಪನ್ಯಾಸಕ ಮಿತ್ರರು ಅತಿಥಿ ಉಪನ್ಯಾಸಕ ಮಿತ್ರರನ್ನೊಳಗೊಡಂತೆ ಎಲ್ಲರಿಗೂ ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಾ, ಮುಂದೆಯೂ ಕೂಡಾ ತಾವೆಲ್ಲರೂ ಅತ್ಯುತ್ತಮವಾಗಿ ಜಿಲ್ಲೆಯ ಫಲಿತಾಂಶ ಹೊರಹೊಮ್ಮಲು ಇಲಾಖೆಗೆ ಬೆನ್ನೆಲುಬಾಗಿ ಶ್ರಮಿಸಿ ವಿದ್ಯಾರ್ಥಿಗಳ ಕಲಿಕಾ ಮಟ್ಟ ಮತ್ತು ಫಲಿತಾಂಶ ಹೆಚ್ಚಿಸುವಲ್ಲಿ ಶ್ರಮಿಸುತ್ತೀರಿ ಎಂದು ಆಶಿಸುತ್ತಾ, ತಮ್ಮೆಲ್ಲರಿಗೂ ಇಲಾಖೆಯ ಪರವಾಗಿ ಹೃತ್ಪೂರ್ವಕವಾದ ಅಭಿನಂದನೆಗಳು.. ವಂದನೆಗಳು...

ಸೋಮಶೇಖರಪ್ಪ ಹೊಕ್ರಾಣಿ ಉಪನಿರ್ದೇಶಕರು. ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ರಾಯಚೂರು.

# ಬೇಸಿಗೆ ಕಾಲ ಹಿನ್ನಲೆಯಲ್ಲಿ ಆರೋಗ್ಯ ಇಲಾಖೆಯಿಂದ ಮುನ್ನೆಚ್ಚರಿಕೆ ವಹಿಸಲು ಸಲಹೆ

**ನೈಜ್ಯ ದೆಸೆ ನ್ಯೂಸ್**

ರಾಯಚೂರು: ಪ್ರಸ್ತುತ ಜಿಲ್ಲೆಯಲ್ಲಿ ಬೇಸಿಗೆ ಕಾಲ ಆರಂಭವಾಗಿದೆ. ಈ ಅವಧಿಯಲ್ಲಿ ಅತಿಯಾದ ಉಷ್ಣಾಂಶದಿಂದ ನಾನಾ ರೀತಿಯ ಅನಾರೋಗ್ಯ ಪರಿಸ್ಥಿತಿಗಳು ಸಂಭವಿಸುವ ಸಾಧ್ಯತೆಗಳಿವೆ. ಹೀಗಾಗಿ ಜಿಲ್ಲಾ ಆರೋಗ್ಯ ಇಲಾಖೆಯಿಂದ ಸಲಹೆಗಳನ್ನು ನೀಡಲಾಗುತ್ತಿದ್ದು, ಅವುಗಳನ್ನು ಸರಿಯಾಗಿ ಪಾಲಿಸಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಕೋರಿದ್ದಾರೆ.

ಪ್ರಸ್ತುತ ವರ್ಷದ ಬೇಸಿಗೆಯು ಪ್ರಖರವಾಗಿರುವ ಸಾಧ್ಯತೆಗಳ ಬಗ್ಗೆ ವರದಿ ಹಿನ್ನಲೆಯಲ್ಲಿ ಮುಖ್ಯವಾಗಿ ಚಿಕ್ಕ ಮಕ್ಕಳು, ಗರ್ಭಿಣಿ, ಬಾಣಂತಿಯರು, ವಯೊವೃದ್ದರ ಕಾಳಜಿಗಾಗಿ ಕುಟುಂಬದ ಸದಸ್ಯರು ಹೆಚ್ಚಿನ ಆಧ್ಯತೆ ನೀಡಬೇಕು. ಬಿಸಿಲಿನ ಪ್ರಖರತೆ ಹೆಚ್ಚಿರುವ ಮಧ್ಯಾಹ್ನ 1 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಹೆಚ್ಚು ಜಾಗರೂಕರಾಗಿರಬೇಕು. ಹೆರಿಗೆ ನಂತರ ಬಾಣಂತಿಯರು ನವಜಾತ ಶಿಶುವಿಗೆ ಮೇಲಿಂದ ಮೇಲೆ ಎದೆ ಹಾಲುಣಿಸುವ ಮೂಲಕ ಶಿಶುವಿನಲ್ಲಾಗುವ ನಿರ್ಜಲೀಕರಣ ತಡೆಯಲು ಸಹಕಾರಿಯಾಗುವುದು.




ರೋಗ ನಿರೋಧಕ ಶಕ್ತಿ ವೃದ್ದಿಸಲು 12 ಮಾರಕ ರೋಗಗಳ ವಿರುದ್ಧ ಲಸಿಕೆ ಹಾಕಿಸಲು ಮರೆಯಬಾರದು. ಪ್ರಖರ ಬಿಸಿಲಿನ ಅವಧಿಯಲ್ಲಿ ಆದಷ್ಟು ಮನೆಯ ಹೊರಗೆ ಹೋಗದಂತೆ ಮುತವರ್ಜಿ ವಹಿಸಿ. ಮನೆಯ ಒಳಗೆ ಅಥವಾ ನೆರಳು ಇರುವ ಸ್ಥಳದಲ್ಲಿ ವಿಶ್ರಾಂತಿ ಪಡೆಯಬೇಕಿದೆ.

ಆದಷ್ಟು ಮಸಾಲೆಯುಕ್ತ ಪದಾರ್ಥಗಳ ಸೇವನೆ ಕಡಿಮೆ ಮಾಡಬೇಕು. ಅಧಿಕ ಬಿಸಿಲಿರುವ ಸಮಯದಲ್ಲಿ ಮನೆಯ ಹೊರಗೆ ಹೊಗದಿರಲು ಯೋಚಿಸಿ, ದೈನಂದಿನವಾಗಿ ತೆಗೆದುಕೊಳ್ಳುವ ಮಾತ್ರೆಗಳನ್ನು ಜೊತೆಯಲ್ಲಿರಿಸಿಕೊಳ್ಳಿ, ದ್ರವ ಆಹಾರ ಹೆಚ್ಚು ಸೇವಿಸಬೇಕು. ಆಟವಾಡುವ ಮಕ್ಕಳು ಬಿಸಿಲಿನಲ್ಲಿ ನಿಲ್ಲಿಸಿರುವ ವಾಹನ ಮುಟ್ಟದಂತೆ ಜಾಗೃತಿ ವಹಿಸಬೇಕು. ಮಕ್ಕಳು ಅಸುರಕ್ಷಿತ ಆಹಾರ, ಪಾನೀಯ ಸೇವಿಸದಂತೆ ನಿಗಾವಹಿಸಿ. ಓಆರ್‌ಎಸ್ ಬಳಕೆಗೆ ಆಧ್ಯತೆ ನೀಡಿ: ನಿರ್ಜಲಿಕರಿಣದಿಂದ ದೇಹದ ನೀರಿನ ಅಂಶದ ಜೊತೆಗೆ ಲವಣಾಂಶ ಕಡಿಮೆಯಾಗದಂತೆ ಓಆರ್‌ಎಸ್ ಜೀವಜಲ ಪ್ಯಾಕೇಟ್ ಸದಾ ಮನೆಯಲ್ಲಿರಲಿ.

ಒಂದು ಲೀಟರ್ ನೀರಿಗೆ ಪ್ಯಾಕೇಟ್ ಸಂಪೂರ್ಣ ಪುಡಿ ಹಾಕಿ ದ್ರಾವಣ ಸಿದ್ದಪಡಿಸಿ 24 ಗಂಟೆಯೊಳಗೆ ಬಳಸಬೇಕು. ಇದಲ್ಲದೆ ಲಿಂಬೂ ಪಾನಕ, ಎಳೆನೀರು, ಮಜ್ಜಿಗೆ ಕುಡಿಯಬಹುದು. ಆಹಾರದಲ್ಲಿ ಬೇಳೆ ತಿಳಿ ಬಳಸಿ, ಅಲ್ಲದೆ ಮುಂಜಾಗೃತವಾಗಿ ಜಿಲ್ಲಾ ಎನ್‌ಪೋರ್ಸಮೆಂಟ್ ಅಧಿಕಾರಿ ಡಾ.ಶಿವಕುಮಾರ ನಾರಾ ನೇತೃತ್ವದಲ್ಲಿ ಜಿಲ್ಲೆಯಾದ್ಯಂತ ಜಿಲ್ಲಾ ವಿಪತ್ತು ವಿಪತ್ತು ನಿರ್ವಹಣಾ ಪ್ರಾಧಿಕಾರದ ಮಾರ್ಗಸೂಚಿಯನ್ವಯ ಆರೋಗ್ಯ ಇಲಾಖೆ ಸಿಬ್ಬಂದಿ ಎಲ್ಲ ಆಸ್ಪತ್ರೆಯ ಬರುವ ಜನತೆಗೆ ಗ್ರಾಮಗಳಲ್ಲಿ ಹತ್ತಿ ಉಡುಪು ಬಳಕೆ, ಛತ್ರಿ ಜೊತೆಯಲ್ಲಿ ನೀರು ಇರುವಂತೆ ಸಾರ್ವಜನಿಕರಿಗೆ ವ್ಯಾಪಕ ಪ್ರಚಾರ ಕೈಗೊಳ್ಳಲಾಗುತ್ತಿದೆ. ವಾಂತಿ ಬೇಧಿ ತಡೆ: ಬೇಸಿಗೆಯಲ್ಲಿ ಕಲುಷಿತ ನೀರಿನ ಸೇವನೆಯಿಂದ ಸಂಭಾವ್ಯ ವಾಂತಿ-ಬೇಧಿ ಪ್ರಕರಣಗಳು ಉಂಟಾಗುವ ಹಿನ್ನಲೆಯಲ್ಲಿ ಶುದ್ದೀಕರಿಸಿದ ನೀರು ಅಥವಾ ನೀರು ಶುದ್ದೀಕರಣ ಘಟಕದ ನೀರನ್ನು ಕುಡಿಯಲು ಬಳಸಬೇಕು.

ಅಲ್ಲದೆ ಊಟದ ಮೊದಲು ಶೌಚದ ನಂತರ ಕೈಗಳನ್ನು ಸಾಬೂನು ಮತ್ತು ನೀರಿನಿಂದ 45 ಸೆಕೆಂಡ್‌ಗಳ ಕಾಲ ತೊಳೆದ ನಂತರ ಆಹಾರ ಸೇವಿಸಬೇಕು. ನೀರಿನ ಸಂಗ್ರಹಣಗಳ ಮೇಲೆ ತಪ್ಪದೇ ಮುಚ್ಚಳ ಮುಚ್ಚಬೇಕು. ಸುರಕ್ಷಿತ ಆಹಾರ ಮಾತ್ರ ಸೇವಿಸಿ, ಆದಷ್ಟು ಮನೆಯಲ್ಲಿ ತಯಾರಿಸಿದ ಆಹಾರಕ್ಕೆ ಆದ್ಯತೆ ನೀಡಬೇಕು. ರಸ್ತೆ ಬದಿ ತೆರೆದಿಟ್ಟ ಆಹಾರ ಪದಾರ್ಥ ಸೇವಿಸಬಾರದು, ಮಲ, ಮೂತ್ರ ವಿಸರ್ಜನೆಗಾಗಿ ಶೌಚಾಲಯ ಬಳಸಬೇಕು. ಇದಕ್ಕಾಗಿ ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ.ಗಣೇಶ್ ಕೆ. ನೇತೃತ್ವದಲ್ಲಿ ಅಗತ್ಯ ಜಾಗೃತಿ ನೀಡಲಾಗುತ್ತಿದೆ. ಅಲ್ಲದೆ ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಮುಂಜಾಗ್ರತಾ ಔಷಧಿಗಳು ಲಭ್ಯವಿವೆ. ಯಾವುದೇ ತುರ್ತು ಸಂದರ್ಭದಲ್ಲಿ 108ಕ್ಕೆ ಕರೆ ಮಾಡಿ ಆಂಬ್ಯುಲೆನ್ಸ್ ಸದುಪಯೋಗ ಪಡೆಯಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಾಹಿತ್ಯ ಸಿಂಚನ

ಒಡಹುಟ್ಟಿದವರು

ಒಂದೇ ಮನೆ ನೆರಳಿನಲ್ಲಿ ಬೆಳೆದವರು ನಾವು,
ಒಂದೇ ತಾಯಿಯ ಮಮತೆಯಲ್ಲಿ ಅರಳಿದವರು ನಾವು.

ನಗು–ಅಳುವ ಕ್ಷಣಗಳೆಲ್ಲ ಹಂಚಿಕೊಂಡವರು,
ಜೀವನದ ದಾರಿಯಲ್ಲಿ ಜೊತೆ ನಡೆದು ಬಂದವರು.

ಸಣ್ಣ ಜಗಳಗಳು ಕ್ಷಣಿಕ ಮಳೆಯಂತೆ,
ಪ್ರೀತಿಯ ಬಂಧವು ಸದಾ ಇಂದ್ರಧನುಷ್ಯಂತೆ.

ದೂರವಾದರೂ ಮನಗಳು ದೂರವಾಗವಿಲ್ಲ,
ಒಡಹುಟ್ಟಿದವರ ಬಂಧ ಎಂದಿಗೂ ಕಳಚುವುದಿಲ್ಲ.

ಬಾಲ್ಯದ ನೆನಪುಗಳು ಹೃದಯದ ಹೂವಂತೆ,
ಸ್ನೇಹದ ಮಾತುಗಳು ಜೀವನದ ಬೆಳಕಂತೆ.

ಸಂಕಟ ಬಂದಾಗ ಮೊದಲ ನೆನಪಾಗುವವರು,
ನಮ್ಮ ಒಡಹುಟ್ಟಿದವರು ಜೀವದ ಆಧಾರವರು.

ಬಸವರಾಜ

# ಸಮ್ಮೇಳನದಲ್ಲಿ ವಿಚಾರಗೋಷ್ಠಿಗಳು, ಪತ್ರಕರ್ತರಿಗೆ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ಬೀದರ್‌ನಲ್ಲಿ ಏ.11, 12ರಂದು 40ನೇ ರಾಜ್ಯಮಟ್ಟದ ಪತ್ರಕರ್ತರ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಆರ್.ಗುರುನಾಥ ತಿಳಿಸಿದರು. ನಗರದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೀದರ್‌ನ ಝೀರಾ ಕನ್ವೆನ್ಶನ್ ಹಾಲ್‌ನಲ್ಲಿ ಅಂದು ಬೆಳಗ್ಗೆ 11 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಮ್ಮೇಳನ ಉದ್ಘಾಟಿಸುವರು.**

ವಸ್ತು ಪ್ರದರ್ಶನಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಚಾಲನೆ ನೀಡುವರು. ಬಸವಕಲ್ಯಾಣದ ಹಾರಕೂಡ ಹಿರೇಮಠದ ಶ್ರೀ ಡಾ.ಚನ್ನವೀರ ಶಿವಾಚಾರ್ಯರು, ಬಸವ ಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದ್ದೇವರು ಸಾನ್ನಿಧ್ಯ ವಹಿಸುವರು. ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್ ಪ್ರಧಾನ ಭಾಷಣ ಮಾಡುವರು. ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅಧ್ಯಕ್ಷತೆ ವಹಿಸುವರು. ಅದಕ್ಕೂ ಮುನ್ನ ಬಸವೇಶ್ವರ ವೃತ್ತದಿಂದ ವೇದಿಕೆವರೆಗೂ ಮೆರವಣಿಗೆ ನಡೆಸಲಾಗುವುದು ಎಂದು ವಿವರಿಸಿದರು. ಹಿಂದೆ ಸಮ್ಮೇಳನವನ್ನು ಕೇವಲ ಒಂದು ದಿನ ಮಾತ್ರ ನಡೆಸಲಾಗುತ್ತಿತ್ತು. ಈಗ ಎರಡು ದಿನ ಮಾಡಲಾಗುತ್ತಿದೆ. ಸಮ್ಮೇಳನದಲ್ಲಿ ಪತ್ರಕರ್ತರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಕೆಲಸವಾಗುತ್ತಿದೆ.

ಈ ಬಾರಿಯೂ ಸಮ್ಮೇಳನದಲ್ಲಿ ಅನೇಕ ಗೋಷ್ಠಿಗಳನ್ನು ಆಯೋಜಿಸಲಾಗಿದೆ. ಮೊದಲ ದಿನ ಮಧ್ಯಾಹ್ನ 2 ಗಂಟೆಗೆ ಗಾಂಧಿ– ಅಂಬೇಡ್ಕರ್ ಮತ್ತು ಪತ್ರಿಕೋದ್ಯಮ ವಿಷಯದ ಕುರಿತು ಗೋಷ್ಠಿ ನಡೆಯಲಿದೆ. ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲ್ ಉದ್ಘಾಟಿಸುವರು. ಸಂಜೆ 4 ಗಂಟೆಗೆ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮತ್ತು ಮಾಧ್ಯಮ ಕುರಿತು 2ನೇ ಗೋಷ್ಠಿ ನಡೆಯಲಿದ್ದು, ಪ್ರಜಾವಾಣಿ ಸಂಪಾದಕರಾದ ರವೀಂದ್ರ ಭಟ್ ಉದ್ಘಾಟಿಸುವರು.

ಅದರ ಜತೆಗೆ ಸಂಜೆ 5.30ಕ್ಕೆ ಗಡಿ ಸಮಸ್ಯೆಗಳು ಕುರಿತು ಸಂವಾದ ಮತ್ತು ಸಂಜೆ 5.50ಕ್ಕೆ ಮಾಧ್ಯಮ ಮತ್ತು ಉದ್ಯಮ ಕುರಿತು ಉಪನ್ಯಾಸ ಆಯೋಜಿಸಲಾಗಿದೆ. ಸಂಜೆ 7 ಗಂಟೆಗೆ ಸಂಗೀತ ಸಂಜೆ ಕಾರ್ಯಕ್ರಮ ಜರುಗಲಿದೆ ಎಂದು ವಿವರಿಸಿದರು. ಇನ್ನೂ ಏ.12ರ ಬೆಳಗ್ಗೆ 9.45ಕ್ಕೆ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅಧ್ಯಕ್ಷತೆಯಲ್ಲಿ ಪ್ರತಿನಿಧಿಗಳ ಸಮಾವೇಶ ಮತ್ತು ಸರ್ವ ಸದಸ್ಯರ ಸಭೆ ಜರುಗಲಿದೆ. ಬೆಳಗ್ಗೆ 11.30ಕ್ಕೆ ಮಾಹಿತಿ ಹಕ್ಕು ಮತ್ತು ಪತ್ರಕರ್ತರು ಕುರಿತು ಮೂರನೇ ವಿಚಾರಗೋಷ್ಠಿ ಜರುಗಲಿದೆ. ಕರ್ನಾಟಕ ಮಾಹಿತಿ ಹಕ್ಕು ಆಯೋಗದ ಆಯುಕ್ತರಾದ ರುದ್ರಣ್ಣ ಹರ್ತಿಕೋಟೆ ಉದ್ಘಾಟಿಸುವರು. ಮತ್ತೋರ್ವ ಆಯುಕ್ತರಾದ ಬದ್ರುದ್ದೀನ್ ವಿಷಯ ಪ್ರಸ್ತಾವನೆ ಮಾಡುವರು.

ಆಯೋಗದ ಕಲಬುರಗಿ ವಿಭಾಗದ ಆಯುಕ್ತರಾದ ಬಿ. ವೆಂಕಟಸಿಂಗ್ ಅವರು ಅಧ್ಯಕ್ಷತೆ ವಹಿಸುವರು. ಮಧ್ಯಾಹ್ನ 12 ಗಂಟೆಗೆ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಡಿಜಟಲೀಕರಣ ಪ್ರಭಾವ ಕುರಿತು ಗೋಷ್ಠಿ ನಡೆಯಲಿದೆ. ಕನ್ನಡಪ್ರಭ ಪ್ರಧಾನ ಸಂಪಾದಕರಾದ ರವಿ ಹೆಗಡೆ ಉದ್ಘಾಟಿಸುವರು. ಅಂದು ಮಧ್ಯಾಹ್ನ 3 ಗಂಟೆಗೆ ಸಮಾರೋಪ ಸಮಾರಂಭ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ. ಸಮ್ಮೇಳನಕ್ಕೆ ಜಿಲ್ಲೆಯಿಂದ ಸುಮಾರು 200ಕ್ಕೂ ಅಧಿಕ ಪತ್ರಕರ್ತರು ಆಗಮಿಸುವ ನಿರೀಕ್ಷೆ ಇದೆ. ವಿವಿಧ ಜನಪ್ರತಿನಿಧಿಗಳು, ಗಣ್ಯರು ಸೇರಿದಂತೆ ಅನೇಕರು ಪಾಲ್ಗೊಳ್ಳುವರು ಎಂದು ವಿವರಿಸಿದರು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ಧಯ್ಯ ಸ್ವಾಮಿ ಕುಕನೂರು, ರಾಜ್ಯ ಸಮಿತಿ ಸದಸ್ಯರಾದ ಬಸವರಾಜ ನಾಗಡದಿನ್ನಿ, ಅರವಿಂದ ಕುಲಕರ್ಣಿ, ಉಪಾಧ್ಯಕ್ಷ ಮಹಾನಂದ ನಾಯಕ, ಖಜಾಂಚಿ ಮಲ್ಲಿಕಾರ್ಜುನಯ್ಯ ಗೋಷ್ಠಿಯಲ್ಲಿದ್ದರು.

# ನಮ್ಮ ಮಾನ್ವಿ ಪತ್ತಿನ ಸೌಹಾರ್ದ ಸಹಕಾರಿ ಸಂಘಕ್ಕೆ 58 ಲಕ್ಷಕ್ಕೂ ಹೆಚ್ಚು ಲಾಭ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ನಮ್ಮ ಮಾನ್ವಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತದ 2025–26ನೇ ಸಾಲಿನ ಹಣಕಾಸು ವರದಿ ಪ್ರಕಟಗೊಂಡಿದ್ದು, ಸಂಘವು 58,57,751.48/– ನಿವ್ವಳ ಲಾಭ ದಾಖಲಿಸಿರುವುದು ಗಮನಾರ್ಹ ಸಾಧನೆ ಎಂದು ಅಧ್ಯಕ್ಷ ಹೆಚ್. ಮೌನೇಶಗೌಡ ಹೇಳಿದರು. ಸದಸ್ಯರ ವಿಶ್ವಾಸ ಮತ್ತು ಸಮರ್ಪಿತ ನಿರ್ವಹಣೆಯಿಂದ ಸಂಘವು ನಿರಂತರವಾಗಿ ಆರ್ಥಿಕ ಪ್ರಗತಿಯನ್ನು ಸಾಧಿಸುತ್ತಿದೆ ಎಂದು ಹೇಳಿದರು.**



ಸಂಘದ ಹಣಕಾಸು ವಿವರಗಳ ಪ್ರಕಾರ, ಶೇರು ಬಂಡವಾಳ ?38,85,200/– ಆಗಿದ್ದು, ಠೇವಣಿಗಳು 12,09,95,654.63/–ಕ್ಕೆ ಏರಿಕೆಯಾಗಿದೆ. ಹೂಡಿಕೆಗಳು 4,16,42,389.82/– ಆಗಿದ್ದು, ರಿಸರ್ವ್ ನಿಧಿ ?2,01,23,424.74/– ಆಗಿದೆ. ಸಾಲ ಮತ್ತು ಮುಂಗಡ ?10,22,05,984/– ಹಾಗೂ ಕಾರ್ಯನಿಧಿ ?14,56,52,327.38/– ಆಗಿದ್ದು, ಸಂಘದ ಆರ್ಥಿಕ ಸ್ಥಿತಿ ಬಲವಾಗಿರುವುದು ಸ್ಪಷ್ಟವಾಗಿದೆ ಎಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳು, ನಿರ್ದೇಶಕರು, ಸಿಬ್ಬಂದಿ ಹಾಗೂ ಸದಸ್ಯರು ಉಪಸ್ಥಿತರಿದ್ದರು.

# ಪುರಸಭೆ ವಿರೋಧ ಪಕ್ಷದ ನಾಯಕ ದೊಡ್ಡಕರಿಯಪ್ಪ ಅಧಿಕಾರ ಸ್ವೀಕಾರ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಸ್ಥಳೀಯ ಪುರಸಭೆಯ ವಿರೋಧ ಪಕ್ಷದ ನಾಯಕರಾಗಿ ನೂತನವಾಗಿ ಆಯ್ಕೆಯಾದ ಹಿರಿಯ ಸದಸ್ಯರಾದ ದೊಡ್ಡಕರಿಯಪ್ಪ ಅವರು ಗುರುವಾರ ಅಧಿಕಾರ ಸ್ವೀಕರಿಸಿದರು.. ಪಟ್ಟಣದ ಪುರಸಭೆ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಸರಳ ಸಮಾರಂಭದಲ್ಲಿ ದೊಡ್ಡಕರಿಯಪ್ಪ ಅವರು ಅಧಿಕಾರ ವಹಿಸಿಕೊಂಡರು.**

ಈ ಸಂದರ್ಭದಲ್ಲಿ ಪಕ್ಷದ ಮುಖಂಡರು, ವಿವಿಧ ವಾರ್ಡ್‌ಗಳ ಸದಸ್ಯರು ಹಾಗೂ ಬೆಂಬಲಿಗರು ಅವರಿಗೆ ಹೂಗುಚ್ಛ ನೀಡಿ, ಸಿಹಿ ಹಂಚುವ ಮೂಲಕ ಅಭಿನಂದನೆ ಸಲ್ಲಿಸಿದರು. ಅಧಿಕಾರ ಸ್ವೀಕರಿಸಿ ಮಾತನಾಡಿದ ದೊಡ್ಡಕರಿಯಪ್ಪ ಅವರು, "ನನ್ನ ಮೇಲೆ ವಿಶ್ವಾಸವಿಟ್ಟು ಈ ಜವಾಬ್ದಾರಿ ನೀಡಿದ ಪಕ್ಷದ ವರಿಷ್ಠರಿಗೆ ಹಾಗೂ ಸಹೋದ್ಯೋಗಿ ಸದಸ್ಯರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಪುರಸಭೆಯಲ್ಲಿ ಆಡಳಿತ ಪಕ್ಷದ ವೈಫಲ್ಯಗಳನ್ನು ಎತ್ತಿ ತೋರಿಸುವ ಜೊತೆಗೆ, ಪಟ್ಟಣದ ಸರ್ವತೋಮುಖ ಅಭಿವೃದ್ಧಿಗೆ ರಚನಾತ್ಮಕ ವಿರೋಧ ಪಕ್ಷವಾಗಿ ಕೆಲಸ ಮಾಡುತ್ತೇನೆ," ಎಂದು ತಿಳಿಸಿದರು.



# ಸಂಸ್ಕಾರ ಶಿಬಿರದಲ್ಲಿ ಉಚಿತ ದಂತ ಚಿಕಿತ್ಸಾ ಶಿಬಿರ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಶ್ರೀ ನೀಲಕಂಟೇಶ್ವರ ಮಂಟಪದಲ್ಲಿ ಯೋಗ ಸನ್ನಿಧಿ ಜ್ಞಾನ ವಿದ್ಯಾಪೀಠ ಟ್ರಸ್ಟ್ ವತಿಯಿಂದ ಬೇಸಿಗೆ ಪ್ರಯುಕ್ತ ಮಕ್ಕಳಿಗಾಗಿ ನಡೆಯುತ್ತಿರುವ ಸಂಸ್ಕಾರ ಶಿಬಿರದಲ್ಲಿ ಇಂದು ಖ್ಯಾತ ದಂತ ವೈದ್ಯರಾದ ದೀಪ್ತಿ ಅವರು ಮಕ್ಕಳಿಗಾಗಿ ಉಚಿತ ದಂತ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಂಡು ತಪಾಸಣೆ ನಡೆಸಿದರು.**

ಶಿಬಿರದ ಮಕ್ಕಳಿಗೆ ಹಲ್ಲುಗಳ ರಕ್ಷಣೆ ಕುರಿತು ಪರಿಶೀಲನೆ ನಡೆಸಿ, ಸೂಕ್ತ ಸಲಹೆಗಳನ್ನು ನೀಡಿದರು. ಮಕ್ಕಳಲ್ಲಿ ವಸಡು ಸಮಸ್ಯೆಗಳನ್ನು ಗುರುತಿಸಿ, ಬಾಯಿ ನೈರ್ಮಲ್ಯದ ಮಹತ್ವವನ್ನು ತಿಳಿಸುವುದು ಅತ್ಯಂತ ಅಗತ್ಯವೆಂದು ತಿಳಿಸಿದ ಅವರು, ಹಲ್ಲುಗಳನ್ನು ಸರಿಯಾಗಿ ಸ್ವಚ್ಛಗೊಳಿಸುವ ವಿಧಾನಗಳ ಬಗ್ಗೆ ಮಕ್ಕಳಿಗೆ ವಿವರಿಸಿದರು. ಸುಮಾರು 40 ಮಕ್ಕಳು ಈ ಶಿಬಿರದಲ್ಲಿ ಭಾಗವಹಿಸಿದರು.

ಶಿಬಿರದ ಅಂತ್ಯದಲ್ಲಿ ದಂತ ವೈದ್ಯರಾದ ದೀಪ್ತಿ ಅವರನ್ನು ಯೋಗ ಸನ್ನಿಧಿ ಟ್ರಸ್ಟ್ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಯೋಗ ಗುರುಗಳಾದ ಅನ್ನದಾನಯ್ಯ, ವೀಣಾ ಅನ್ನದಾನಯ್ಯ, ಡಾ. ವಿಕ್ರಮಾದಿತ್ಯ, ಸಿ.ಡಿ. ವಿಜಯಕುಮಾರ್, ಅರುಣ್ ಕುಮಾರ್, ಮಲ್ಲೇಶ್ ನಾಯಕ ಸೇರಿದಂತೆ ಹಲವರು ಭಾಗವಹಿಸಿ ಶಿಬಿರವನ್ನು ಯಶಸ್ವಿಗೊಳಿಸಿದರು.



# ಜೆಸ್ಕಾಂ ನಗರ–2: ಏಪ್ರಿಲ್ 11ರಂದು ವಿದ್ಯುತ್ ವ್ಯತ್ಯಯ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ 2ರ 110 ಕೆ.ವಿ ಮೇಸ್, ವಡವಟ್ಟಿ ವಿದ್ಯುತ್ ಮಾರ್ಗದ ದುರಸ್ತಿ ಹಾಗೂ ಸುಧಾರಣೆ ಕಾಮಗಾರಿಯನ್ನು ನಿರ್ವಹಿಸುವ ಪ್ರಯುಕ್ತ ಏಪ್ರಿಲ್ 11ರ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ದೇವಿ ನಗರ, ಹರಿಜನವಾಡ, ನವಾಬ್ ಗಡ್ಡ, ಎನ್.ಜಿ.ಓ ಕಾಲೋನಿ,**

ಮುನ್ನೂರುವಾಡಿ. ಜಲಾಲ್ ನಗರ, ಮಾರ್ಕೆಟ್ ಯಾರ್ಡ್, ನೀರಭಾವಿ ಕುಂಟಾ, ಬಸವನಭಾವಿ ಸರ್ಕಲ್, ತಾಯಮ್ಮ ಗುಡಿ, ದೇವಿನಗರ, ಅಶ್ವಿನಿ ಕಾಲೋನಿ, ಅಗ್ರೀಗೋಲ್ಡ್, ಗದ್ವಾಲ ರೋಡ, ಎಮ್.ವಿ.ಜಿ. ಲೇಔಟ್ ಸೇರಿದಂತೆ ಸುತ್ತಮುತ್ತಲಿನ ಎಲ್ಲಾ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ನಿರಂತರ ಗ್ರಾಹಕರ ಸೇವಾ ಕೇಂದ್ರ ದೂರವಾಣಿ ಸಂಖ್ಯೆ: 08532–226386, 08532–231999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ 2ರ ಸಹಾಯಕಕಾರ್ಯನಿರ್ವಾಹಕಅಭಿಯಂತರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




# ಮಾನ್ವಿಯ ಸರ್ವೋದಯ ಪಿಯು ಕಾಲೇಜಿಗೆ ಭರ್ಜರಿ ಫಲಿತಾಂಶ

## ತಾಲೂಕು ಫಸ್ಟ್ ಸಾಧನೆ, ಮಾಯನ ಅಂಜುಮ್ ತಾಲೂಕು ಟಾಪರ್ ಡಿಸ್ಟಿಂಕ್ಷನ್ 30 । ಫಸ್ಟ್ ಕ್ಲಾಸ್ 66 । ಸೆಕಂಡ್ ಕ್ಲಾಸ್ 13 । ತಾಲೂಕಿಗೆ ಪ್ರಥಮ, ದ್ವಿತೀಯ, ತೃತೀಯ ಫಲಿತಾಂಶ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಇತ್ತೀಚೆಗೆ ಪ್ರಕಟಗೊಂಡ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶದಲ್ಲಿ ಮಾನ್ವಿ ತಾಲೂಕಿನ ಪ್ರತಿಷ್ಠಿತ 'ಸರ್ವೋದಯ ಪಿಯು ಕಾಲೇಜು' ಅತ್ಯುತ್ತಮ ಅಂಕಗಳನ್ನು ಗಳಿಸುವ ಮೂಲಕ ತಾಲೂಕು ಮಟ್ಟದಲ್ಲಿಯೇ ಪ್ರಥಮ ಸ್ಥಾನ ಪಡೆದು ಅಪೂರ್ವ ಸಾಧನೆಗೈದಿದೆ. ಗುಣಮಟ್ಟದ ಶಿಕ್ಷಣಕ್ಕೆ ಹೆಸರಾಗಿರುವ ಈ ಕಾಲೇಜು, ಪ್ರತಿ ವರ್ಷದಂತೆ ಈ ಬಾರಿಯೂ ತನ್ನ ಶೈಕ್ಷಣಿಕ ಮೇಲುಗೈಯನ್ನು ಸಾಧಿಸಿ, ತಾಲೂಕಿನ ಶೈಕ್ಷಣಿಕ ವಲಯದಲ್ಲಿ ಹೊಸ ಸಂಚಲನ ಮೂಡಿಸಿದೆ.**

**ಗಮನಾರ್ಹ ಫಲಿತಾಂಶ:** ಡಿಸ್ಟಿಂಕ್ಷನ್‌ನಲ್ಲಿ 30 ವಿದ್ಯಾರ್ಥಿಗಳು: ಕಾಲೇಜಿನ ಒಟ್ಟು ಫಲಿತಾಂಶ ಅತ್ಯಂತ ವಿಶಿಷ್ಟವಾಗಿದೆ. ಪರೀಕ್ಷೆಗೆ ಹಾಜರಾಗಿದ್ದ ವಿದ್ಯಾರ್ಥಿಗಳ ಪೈಕಿ ಬರೋಬ್ಬರಿ 30 ವಿದ್ಯಾರ್ಥಿಗಳು 'ಡಿಸ್ಟಿಂಕ್ಷನ್' (ಅತ್ಯುನ್ನತ ಶ್ರೇಣಿ) ನಲ್ಲಿ ತೇರ್ಗಡೆಯಾಗಿದ್ದಾರೆ. 66 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಹಾಗೂ 13 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿಗಳ ಶ್ರದ್ಧೆ, ಪೋಷಕರ ನಿರಂತರ ಪ್ರೋತ್ಸಾಹ ಹಾಗೂ ಉಪನ್ಯಾಸಕರ ಸಮರ್ಪಿತ ಬೋಧನೆಯೇ ಈ ಅದ್ಭುತ ಸಾಧನೆಗೆ ಮುಖ್ಯ ಕಾರಣವಾಗಿದೆ ಎಂದು ವಿಶ್ಲೇಷಿಸಲಾಗಿದೆ.

**ಯಶಸ್ಸಿನ ಗುಟ್ಟು:** ಗುಣಮಟ್ಟದ ಶಿಕ್ಷಣ ಮತ್ತು ನಿರಂತರ ಮಾರ್ಗದರ್ಶನ: ಸರ್ವೋದಯ ಪಿಯು ಕಾಲೇಜಿನ ಈ ಯಶಸ್ಸು ಕೇವಲ ಕಾಕತಾಳೀಯವಲ್ಲ. ವರ್ಷಪೂರ್ತಿ ನಡೆಯುವ ನಿಯಮಿತ ತರಗತಿಗಳು, ವಿದ್ಯಾರ್ಥಿಗಳ ಕೌಶಲ್ಯ ವೃದ್ಧಿಗೆ ವಿಶೇಷ ತರಬೇತಿ ಶಿಬಿರಗಳು, ಹಾಗೂ ಪರೀಕ್ಷಾ ಭಯ ಹೋಗಲಾಡಿಸಲು ನಡೆಸುವ ಮಾದರಿ ಪರೀಕ್ಷೆಗಳು ಈ ಫಲಿತಾಂಶಕ್ಕೆ ಬುನಾದಿಯಾಗಿವೆ. ಪರೀಕ್ಷೆಗೆ ಮುನ್ನ ನಡೆದ ಪುನರವಲೋಕನ ತರಗತಿಗಳು (Revision Classes) ವಿದ್ಯಾರ್ಥಿಗಳಲ್ಲಿ ಅಪಾರ ಆತ್ಮವಿಶ್ವಾಸವನ್ನು ತುಂಬಿವೆ. ಇಲ್ಲಿನ ಉಪನ್ಯಾಸಕ ವೃಂದವು ಪ್ರತಿಯೊಬ್ಬ ವಿದ್ಯಾರ್ಥಿಯ ಮೇಲೂ ವಿಶೇಷ ಗಮನ ಹರಿಸುತ್ತದೆ. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಗುರುತಿಸಿ, ಅವರ ದುರ್ಬಲ ವಿಷಯಗಳಲ್ಲಿ ಹೆಚ್ಚುವರಿ ತರಬೇತಿ ನೀಡುವ ಮೂಲಕ ಪ್ರತಿಯೊಬ್ಬರೂ ಯಶಸ್ಸಿನ ಮೆಟ್ಟಿಲೇರುವಂತೆ ನೋಡಿಕೊಳ್ಳಲಾಗಿದೆ.

ತಾಲೂಕಿಗೆ ಕೀರ್ತಿ ತಂದ ಟಾಪರ್ ಮಾಯನ ಅಂಜುಮ್: ಈ ವರ್ಷದ ಫಲಿತಾಂಶದ ಪ್ರಮುಖ ಆಕರ್ಷಣೆಯಾಗಿ ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿನಿ ಮಾಯನ ಅಂಜುಮ್ (ತಂದೆ. ಮೊಹಮ್ಮದ್ ಯೂಸುಫ್) ಹೊರಹೊಮ್ಮಿದ್ದಾರೆ. ಒಟ್ಟು 600 ಅಂಕಗಳಿಗೆ 581 ಅಂಕಗಳನ್ನು (96.8%) ಪಡೆಯುವ ಮೂಲಕ ತಾಲೂಕು ಮಟ್ಟದಲ್ಲಿಯೇ ಪ್ರಥಮ ಸ್ಥಾನ ಗಳಿಸಿ ಕಾಲೇಜಿನ ಹಾಗೂ ಪೋಷಕರ ಕೀರ್ತಿಯನ್ನು ಪತಾಕೆಯಂತೆ ಹಾರಿಸಿದ್ದಾರೆ. ಇವರ ಈ ಅಸಾಧಾರಣ ಸಾಧನೆ ಮುಂಬರುವ ವಿದ್ಯಾರ್ಥಿಗಳಿಗೆ ಬಹುದೊಡ್ಡ ಪ್ರೇರಣೆಯಾಗಿದ್ದು, ಸರ್ವೋದಯ ಕಾಲೇಜಿನ ಇತಿಹಾಸದಲ್ಲಿ ಮತ್ತೊಂದು ಸುವರ್ಣ ಮೈಲುಗಲ್ಲಾಗಿ ದಾಖಲಾಗಿದೆ.

ತಾಲೂಕಿನಲ್ಲಿ 'ಫಸ್ಟ್ ಕಾಲೇಜ್' ಎಂಬ ಹೆಗ್ಗಳಿಕೆ: ಸತತವಾಗಿ ಶೈಕ್ಷಣಿಕ ರಂಗದಲ್ಲಿ ತನ್ನದೇ ಆದ ಛಾಪು ಮೂಡಿಸುತ್ತಿರುವ ಸರ್ವೋದಯ ಪಿಯು ಕಾಲೇಜ್, ಈ ಬಾರಿಯ ಫಲಿತಾಂಶದಿಂದಾಗಿ ಮಾನ್ವಿ ತಾಲೂಕಿನಲ್ಲಿಯೇ "ಫಸ್ಟ್ ಕಾಲೇಜ್" ಎಂಬ ಗೌರವಕ್ಕೆ ಪಾತ್ರವಾಗಿದೆ. ಕೇವಲ ಮಾನ್ವಿ ಮಾತ್ರವಲ್ಲದೆ ಸುತ್ತಮುತ್ತಲಿನ ಹಳ್ಳಿಗಳ ವಿದ್ಯಾರ್ಥಿಗಳಿಗೂ ಹಾಗೂ ಪೋಷಕರಿಗೂ ಇದೀಗ ಸರ್ವೋದಯ ಕಾಲೇಜು ಮೊದಲ ಆಯ್ಕೆಯಾಗಿ ಪರಿಣಮಿಸಿದೆ. ಈ ಎಲ್ಲ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ತಾಲೂಕಿನಾದ್ಯಂತ ವಿಶೇಷ ಗಮನ ಸೆಳೆದಿದ್ದು, ಕಾಲೇಜು ನೀಡುತ್ತಿರುವ ಶಿಕ್ಷಣದ ಗುಣಮಟ್ಟವನ್ನು ಎತ್ತಿ ತೋರಿಸುತ್ತದೆ.

ಕಾಲೇಜ್ ಆಡಳಿತ ಮಂಡಳಿಯ ಹರ್ಷ: "ತಾಲೂಕು ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದಿರುವುದು ನಮ್ಮ ಕಾಲೇಜಿನ ಆಡಳಿತ ಮಂಡಳಿ, ಬೋಧಕ ವರ್ಗ ಹಾಗೂ ಎಲ್ಲರಿಗೂ ಅತ್ಯಂತ ಹೆಮ್ಮೆಯ ವಿಷಯವಾಗಿದೆ. ವಿದ್ಯಾರ್ಥಿಗಳ ಕಠಿಣ ಪರಿಶ್ರಮ, ಪೋಷಕರ ನಿರಂತರ ಬೆಂಬಲ ಮತ್ತು ನಮ್ಮ ಶಿಕ್ಷಕರ ನಿಸ್ವಾರ್ಥ ಸಮರ್ಪಣೆಯಿಂದ ಈ ಸಾಧನೆ ಸಾಧ್ಯವಾಗಿದೆ. ಮುಂದಿನ ಶೈಕ್ಷಣಿಕ ವರ್ಷಗಳಲ್ಲೂ ಇದೇ ಹಾದಿಯಲ್ಲಿ ಸಾಗಿ, ಇನ್ನಷ್ಟು ಅತ್ಯುತ್ತಮ ಫಲಿತಾಂಶ ನೀಡಲು ನಮ್ಮ ಸಂಸ್ಥೆ ಬದ್ಧವಾಗಿದೆ.




ಮಾಯನ ಅಂಜುಮ್ –581 (96.8%)
ವೇದಾವತಿ (ತಂದೆ: ರಾಜಶೇಖರ್) – 580 (96.6%)
ಪ್ರಿಯಾಂಕ (ತಂದೆ: ನಿಂಗಪ್ಪ) – 579 (96.5%)
ಕೈಸರ್ (ತಂದೆ: ಶೆಕ್ಷಾವಲಿ) – 575 (95.8%)
ಸಿಂಧೂ ಎನ್. (ತಂದೆ: ನೂರುಸ) – 570 (95%)
ರಾಜು (ತಂದೆ: ಸಾಬಣ್ಣ) – 569 (94.8%)
ಯಶ್ವಂತ್ (ತಂದೆ: ಅಮರೇಶ್) – 568 (94.6%)
ಎಂ.ಡಿ. ಮಕ್ಸುದ್ (ತಂದೆ: ಎಂ.ಡಿ. ಮೊಹಮ್ಮದ್) 566 (94%)

**ಡಿಸ್ಟಿಂಕ್ಷನ್ – 30 ವಿದ್ಯಾರ್ಥಿಗಳು**
**ಪ್ರಥಮ ದರ್ಜೆ – 66 ವಿದ್ಯಾರ್ಥಿಗಳು**
**ದ್ವಿತೀಯ ದರ್ಜೆ – 13 ವಿದ್ಯಾರ್ಥಿಗಳು**
**90% ಮೇಲೆ 16 ವಿದ್ಯಾರ್ಥಿಗಳು**
**80% 37 ಮೇಲೆ ವಿದ್ಯಾರ್ಥಿಗಳು**

ಉತ್ತಮ ಫಲಿತಾಂಶ ಸಾಧಿಸಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಹೃತ್ಪೂರ್ವಕ ಅಭಿನಂದನೆಗಳು. ವಿದ್ಯಾರ್ಥಿಗಳ ಪರಿಶ್ರಮ, ಶಿಕ್ಷಕರ ಸಮರ್ಪಿತ ಬೋಧನೆ ಹಾಗೂ ಪೋಷಕರ ಸಹಕಾರದಿಂದ ಈ ಸಾಧನೆ ಸಾಧ್ಯವಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ನಮ್ಮ ಸಂಸ್ಥೆ ನಿರಂತರವಾಗಿ ಗುಣಮಟ್ಟದ ಶಿಕ್ಷಣ ನೀಡಲು ಬದ್ಧವಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಉತ್ತಮ ಫಲಿತಾಂಶಗಳನ್ನು ಸಾಧಿಸುವ ವಿಶ್ವಾಸವಿದೆ. ಇದೇ ಉತ್ಸಾಹ ಮತ್ತು ಶ್ರಮವನ್ನು ಮುಂದುವರಿಸಿ ವಿದ್ಯಾರ್ಥಿಗಳು ಜೀವನದಲ್ಲಿ ಉನ್ನತ ಸಾಧನೆ ಮಾಡಲಿ ಎಂದು ಹಾರೈಸುತ್ತೇನೆ.
ಅಧ್ಯಕ್ಷ ಮನೋಜ್ ಮಿಶ್ರಾ

## ಪೋಷಕರ ಪ್ರತಿಕ್ರಿಯೆಗಳು:

"ನಮ್ಮ ಮಗಳು ತಾಲೂಕು ಮಟ್ಟದಲ್ಲಿಯೇ ಅತ್ಯುತ್ತಮ ಅಂಕಗಳನ್ನು ಗಳಿಸಿದ್ದಕ್ಕೆ ತುಂಬಾ ಸಂತೋಷವಾಗಿದೆ. ಕಾಲೇಜಿನ ಉಪನ್ಯಾಸಕರ ಮಾರ್ಗದರ್ಶನ ಬಹಳ ಉತ್ತಮವಾಗಿದ್ದರಿಂದಲೇ ಈ ಸಾಧನೆ ಮಾಡಲು ಸಾಧ್ಯವಾಯಿತು."– ಮೊಹಮ್ಮದ್ ಯೂಸುಫ್ (ಟಾಪರ್ ಮಾಯನ ಅಂಜುಮ್ ತಂದೆ)

"ಮಕ್ಕಳ ಸಾಧನೆ ನಮ್ಮ ಕುಟುಂಬಕ್ಕೆ ದೊಡ್ಡ ಹೆಮ್ಮೆ ತಂದಿದೆ. ಅವರ ಹಗಲಿರುಳಿನ ಕಠಿಣ ಪರಿಶ್ರಮಕ್ಕೆ ಸರ್ವೋದಯ ಕಾಲೇಜಿನಲ್ಲಿ ಸರಿಯಾದ ಫಲ ಮತ್ತು ಮಾರ್ಗದರ್ಶನ ಸಿಕ್ಕಿದೆ." – ರಾಜಶೇಖರ್ (ವೇದಾವತಿ ತಂದೆ)

"ಸರ್ವೋದಯ ಪಿಯು ಕಾಲೇಜು ವಿದ್ಯಾರ್ಥಿಗಳಿಗೆ ಕೇವಲ ಪಠ್ಯವಲ್ಲದೆ, ಆತ್ಮವಿಶ್ವಾಸ ತುಂಬುವ ಅತ್ಯುತ್ತಮ ಶಿಕ್ಷಣ ನೀಡುತ್ತಿರುವುದರಿಂದಲೇ ನಮ್ಮ ಮಗಳು ಇಷ್ಟು ಉತ್ತಮ ಅಂಕಗಳನ್ನು ಗಳಿಸಿದ್ದಾನೆ." –ನಿಂಗಪ್ಪ (ಪ್ರಿಯಾಂಕ ಹೊಸಮನಿ ತಂದೆ)

"ನಮ್ಮ ಮಗ ಉತ್ತಮ ಅಂಕಗಳುನ್ನು ಗಳಿಸಿರುವುದು ನಮ್ಮ ಕುಟುಂಬಕ್ಕೆ ಹೆಮ್ಮೆಯ ಸಂಗತಿ. ಕಾಲೇಜಿನ ಶಿಕ್ಷಕರು ಮಾರ್ಗದರ್ಶನ ಮತ್ತು ಶಿಸ್ತಿನ ವಾತಾವರಣ ಇದಕ್ಕೆ ಪ್ರಮುಖ ಕಾರಣವಾಗಿದೆ." –ಶೆಕ್ಷಾವಲಿ (ಎಮ್.ಡಿ ಕೈಸರ್ ತಂದೆ)

ಸರ್ವೋದಯ ಪಿಯು ಕಾಲೇಜ್ ವಿದ್ಯಾರ್ಥಿಗಳು ತಾಲೂಕು ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ಮಾನ್ವಿಯ ಹೆಮ್ಮೆ ಹೆಚ್ಚಿಸಿದ್ದಾರೆ. ಈ ಸಾಧನೆಗೆ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಕಾಲೇಜಿನ ನಿರ್ವಹಣಾ ಮಂಡಳಿಯ ಸಮರ್ಪಿತ ಪ್ರಯತ್ನ ಕಾರಣವಾಗಿದೆ. ಎಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳು. ಇಂತಹ ಫಲಿತಾಂಶಗಳು ನಮ್ಮ ಪ್ರದೇಶದ ಶಿಕ್ಷಣ ಮಟ್ಟವನ್ನು ಇನ್ನಷ್ಟು ಎತ್ತರಕ್ಕೆ ತೆಗೆದುಕೊಂಡು ಹೋಗುತ್ತವೆ." – ಶಾಸಕ ಹಂಪಯ್ಯ ಸಾಹುಕಾರ

## ನೇಮಕಾತಿ ಪ್ರಕಟಣೆ

ನಿಮ್ಹಾನ್ಸ್ ನೇಮಕಾತಿ 2026–3 ಕೋ–ಆರ್ಡಿನೇಟ–ರ್ ಹುದ್ದೆಗಳಿಗೆ ವಾಕ್–ಇನ್ ಸಂದರ್ಶನ ಏಪ್ರಿಲ್ 9, 2026 ನಿಮ್ಹಾನ್ಸ್ ನೇಮಕಾತಿ 2026: 3 ಕೋ–ಆರ್ಡಿನೇಟ–ರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆಯು ಏಪ್ರಿಲ್ 2026 ರ ನಿಮ್ಹಾನ್ಸ್ ಅಧಿಕೃತ ಅಧಿಸೂಚನೆಯ ಮೂಲಕ ಕೋ–ಆರ್ಡಿನೇಟರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರು – ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 25–ಏಪ್ರಿಲ್–2026 ರಂದು ವಾಕ್–ಇನ್–ಇಂಟರ್ವ್ಯೂಗೆ ಹಾಜರಾಗಬಹುದು. ಅಧಿಸೂಚನೆ ಬಿಡುಗಡೆ ದಿನಾಂಕ: 08–04–2026 ವಾಕ್–ಇನ್ ದಿನಾಂಕ: 25–ಏಪ್ರಿಲ್–2026 ಅಧಿಕೃತ ವೆಬ್‌ಸೈಟ್: nimhans.ac.in

# ಅತಿಸಾರ ಬೇಧಿಯನ್ನು ನಿರ್ಲಕ್ಷಿಸಬೇಡಿ.

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ಮಕ್ಕಳಲ್ಲಿ ಅತಿಸಾರ ನಿರ್ವಹಣೆಗಾಗಿ ಸೇವಿಸುವ ಆಹಾರ ಪದಾರ್ಥಗಳನ್ನು ಹೆಚ್ಚು ಕಾಳಜಿ ಹಾಗೂ ಯಾವುದೇ ಕಾರಣಲ್ಕೂ ದೇಹದಲ್ಲಿನ ನೀರಿನಂಶದ ಕೊರತೆ ಉಂಟಾಗದಂತೆ ನಿಗಾವಹಿಸಲು ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಮೇರಿ ತಿಳಿಸಿದರು.**

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರ್ ತಾಲೂಕು ಆರೋಗ್ಯಾಧಿಕಾರಿಗಳ ಕಾರ್ಯಾಲಯ ಸಿಂಧನೂರುನ ನಗರದ ವಾರ್ಡ್ ನಂಬರ್ 23ರ ಅಂಗನವಾಡಿ ಕೇಂದ್ರದಲ್ಲಿ ಅತಿಸಾರ ಬೇಧಿ ಕುರಿತು ಜಾಗೃತಿ ನೀಡಿ ಮಾತನಾಡುತ್ತಾ,




ಸಾಮಾನ್ಯವಾಗಿ 5 ವರ್ಷದೊಳಗಿನ ಮಕ್ಕಳನ್ನು ಅತಸಾರ ಬೇಧಿಯಿಂದ ಸಂರಕ್ಷಿಸುವ ದಿಶೆಯಲ್ಲಿ ಆಹಾರ ಸಿದ್ದಪಡಿಸುವ ಹಾಗೂ ಉಣಿಸುವ ಪೂರ್ವದಲ್ಲಿ ತಾಯಿ ಕೈಗಳನ್ನು ಸ್ವಚ್ಚವಾಗಿ ತೊಳೆದುಕೊಳ್ಳಬೇಕು ಎಂದು ವಿನಂತಿಸಿದರು.

ನಂತರ ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗೀತಾ ಹಿರೇಮಠ, ದಿನನಿತ್ಯ ಆಹಾರ ಸಿದ್ದಪಡಿಸುವಾಗ ಶುಧ್ದವಾದ ನೀರು ಬಳಕೆ, ಸಿದ್ದಪಡಿಸಿದ ಆಹಾರ ಪದಾಥ–ರ್ ಮುಚ್ಚಿಡಲು ನಿಗಾವಹಿಸಬೇಕು. ಮುಖ್ಯವಾಗಿ ಬೇಧಿಯ ಪ್ರಕರಣಗಳಲ್ಲಿ ಮಕ್ಕಳ ಕಣ್ಣುಗಳು ಒಳಕ್ಕೆ ಹೋಗಿರುವುದು, ಕುಡಿಯಲು ಸಾಧ್ಯವಾಗದೇ ಇರುವುದು ಅಥವಾ ಕಡಿಮೆ ಕುಡಿಯುವುದು, ಚರ್ಮವನ್ನು ಚುವುಟಿದರೆ ನಿಧಾನವಾಗಿ ಮೊದಲಿನ ಸ್ಥಿತಿಗೆ ಬರುವದು ಕಂಡು ಬಂದರೆ ನಿರ್ಲಕ್ಷ್ಯ ಮಾಡಬಾರದು, ಹೆಚ್ಚು ಓಆರ್‌ಎಸ್ ದ್ರಾವಣ ಕುಡಿಸಬೇಕು.

ಇದರೊಂದಿಗೆ ಮಗುವಿನ ವಯಸ್ಸಿನ ಅನುಸಾರ ಮನೆಯಲ್ಲಿ ತಯಾರಿಸಿದ ಗಂಜಿ, ಬೇಳೆ ತಿಳಿ, ಕೊಡಬೇಕು ಎಂದು ತಿಳಿಸಿದರು. ಸಂದರ್ಭದಲ್ಲಿ ತ್ರೆಜಾ ಪಿಹೆಚ್‌ಸಿಓ, ಕಸ್ತೂರಿ ಆಶಾ ಕಾರ್ಯಕರ್ತೆ, ಪದ್ಮಾ, ಅಂಗನವಾಡಿ ಕಾರ್ಯಕರ್ತೆ, ರಾಜ್ಮಾ ಅಂಗನವಾಡಿ ಸಹಾಯಕಿ ಗರ್ಭಿಣಿ ತಾಯಂದಿರು ಉಪಸ್ಥಿತರಿದ್ದರು.

## ಬೆಂಗಳೂರಲ್ಲಿ ಜೋಂಬಿ ಡ್ರಗ್ಸ್: ಆತಂಕ ವ್ಯಕ್ತಪಡಿಸಿದ ನಟ ವಿಜಯ್

**ನೈಜ್ಯ ದೆಸೆ ನ್ಯೂಸ್**

**ಬೆಂಗಳೂರು: ನಗರದಲ್ಲಿ ಜೋಂಬಿ ಡ್ರಗ್ಸ್ ಪ್ರವೇಶಿಸಿರುವ ಬಗ್ಗೆ ಮಾಹಿತಿಯನ್ನು ಪತ್ತೆ ಹಚ್ಚಿ ಜನರಿಗೆ ವಾಸ್ತವಾಂಶ ತಿಳಿಸುವಂತೆ ನಟ ದುನಿಯಾ ವಿಜಯ್ ಮನವಿ ಮಾಡಿದ್ದಾರೆ.ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋವೊಂದನ್ನು ಹಂಚಿಕೊಂಡಿದ್ದಾರೆ. ಅದರಲ್ಲಿ ವ್ಯಕ್ತಿಯೊಬ್ಬರು ನಿಂತ ಜಾಗದಲ್ಲೇ ಅರೆಪ್ರಜ್ಞಾವಸ್ಥೆಯಲ್ಲಿ ಅಲುಗಾಡುತ್ತಿರುವುದು ಕಂಡು ಬರುತ್ತಿದೆ.**



ಈ ವೀಡಿಯೋ ಬೆಂಗಳೂರಿಗೆ ಸೇರಿದ್ದು ಎಂದು ಹೇಳಲಾಗುತ್ತಿದ್ದು, ಸದರಿ ವ್ಯಕ್ತಿ ಅಪಾಯಕಾರಿಯಾದ ಜೋಂಬಿ ಡ್ರಗ್ಸ್ ಅನ್ನು ಸೇವಿಸಿದ್ದಾನೆ ಎಂದು ಹೇಳಲಾಗಿದೆ.ಈ ಹಿನ್ನೆಲೆಯಲ್ಲಿ ಪೊಲೀಸರು ಹಾಗೂ ಸಾರ್ವಜನಿಕರಲ್ಲಿ ದುನಿಯಾ ವಿಜಯ್ ಮನವಿ ಮಾಡಿಕೊಂಡಿದ್ದಾರೆ. ಈ ಮೊದಲು ಭೀಮ ಸಿನಿಮಾದಲ್ಲಿ ಗಾಂಜಾ ಹಾಗೂ ಟೈಡೆಲ್ ಡ್ರಗ್?ಸ ಬಗ್ಗೆ ಚರ್ಚೆ ಮಾಡಲಾಗಿ–ತ್ತು. ಈಗ ಬೆಂಗಳೂರಿಗೆ ಹೊಸದಾಗಿ ಜೋಂಬಿ ಎಂಬ ಡ್ರಗ್?ಸ ಬಂದಿರುವುದಾಗಿ ಹೇಳಲಾಗುತ್ತಿದೆ. ಯುವಕರು ಎಚ್ಚರವಾಗಿರಬೇಕು. ಅದರಲ್ಲೂ ಪೋಷಕರು ತಮ ಮಕ್ಕಳ ಮೇಲೆ ತೀವ್ರ ನಿಗಾವಹಿಸಬೇಕು ಎಂದು ಮನವಿ ಮಾಡಿದ್ದಾರೆ. ಪೊಲೀಸ್ ಇಲಾಖೆ ಈಗಾಗಲೇ ಮಾದಕ ವಸ್ತುಗಳ ವಿರುದ್ಧ ಕಠಿಣ ಕ್ರಮ ಕೈಗೊಂಡಿದೆ. ಜೋಂಬಿ ಡ್ರಗ್?ಸ ಬಗ್ಗೆ ವಾಸ್ತವಾಂಶವನ್ನು ಪತ್ತೆ ಹಚ್ಚಿ ಜನರಿಗೆ ಮಾಹಿತಿ ನೀಡಬೇಕು. ಸಾರ್ವಜನಿಕರು ಈ ರೀತಿ ಅಪಾಯಕಾರಿ ಡ್ರಗ್?ಸ ಬಗ್ಗೆ ಮಾಹಿತಿ ದೊರೆತರೆ ತಕ್ಷಣವೇ ಪೊಲೀಸರಿಗೆ ವಿಷಯ ತಿಳಿಸಬೇಕೆಂದು ದುನಿಯಾ ವಿಜಯ್ ಮನವಿ ಮಾಡಿದ್ದಾರೆ. ಜೋಂಬಿ ಡ್ರಗ್?ಸ ಈಗಾಗಲೇ ಬಹಳಷ್ಟು ಕಡೆ ಹರಿದಾಡಿದ್ದು, ತೀವ್ರ ಪರಿಣಾಮವನ್ನು ಸೃಷ್ಟಿಸಿದೆ. ಅದು ಬೆಂಗಳೂರಿಗೂ ಕಾಲಿಟ್ಟಿದೆ ಎಂಬ ಬಗ್ಗೆ ತೀವ್ರ ಆತಂಕ ಸೃಷ್ಟಿಯಾಗಿದೆ ಎಂದರು.

# ಮುಖಂಡರ ಒಗ್ಗಟ್ಟಿನಿಂದ ಸಹಕಾರ ಸಂಘ ಚುನಾವಣೆಯಲ್ಲಿ ಗೆಲುವು ವೀರಣ್ಣ ಬಳೆ



**ನೈಜ್ಯ ದೆಸೆ ನ್ಯೂಸ್**

**ಜಾಲಹಳ್ಳಿ: ಪ್ರವಾಸಿ ಮಂದಿರದಲ್ಲಿ ಇಂದು ನೈಜ್ಯ–ದೆಸೆ ಕನ್ನಡ ದಿನಪತ್ರಿಕೆ ವರದಿಗಾರರೊಂದಿಗೆ ಜೊತೆ ಮಾತನಾಡಿದ ಪಕ್ಷಾತೀತ ಪ್ರಗತಿಪರ ರೈತರ ಒಕ್ಕೂಟದ ಮುಖಂಡರಾದ ಶ್ರೀ ವೀರಣ್ಣ ಬಳೆ ಸಾಹುಕಾರ್ ಅವರು, ಜಾಲಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಸಾಧಿಸಿದ ಗೆಲುವಿನ ಕುರಿತು ಪ್ರತಿಕ್ರಿಯಿಸಿದರು.**

ಅವರು ಮಾತನಾಡುತ್ತಾ, ಜಾಲಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಎಲ್ಲಾ ಮುಖಂಡರ ಒಗ್ಗಟ್ಟಿನಿಂದ 12 ಸ್ಥಾನಗಳ ಪೈಕಿ 10 ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಯಿತು ಎಂದು ಹೇಳಿದರು. ಈ ಗೆಲುವಿಗೆ ಒಗ್ಗಟ್ಟು ಮುಖ್ಯ ಕಾರಣವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಸುಮಾರು 35 ವರ್ಷಗಳಿಂದ ಸಹಕಾರ ಸಂಘಕ್ಕೆ ಸೇವೆ ಸಲ್ಲಿಸುತ್ತಾ ಬಂದಿದ್ದು, ರೈತರಿಗೆ ಅನುಕೂಲವಾಗುವಂತೆ ವಿವಿಧ ಯೋಜನೆಗಳು ಹಾಗೂ ಸಾಲ ಸೌಲಭ್ಯಗಳನ್ನು ಒದಗಿಸುವ ಮೂಲಕ ಸಂಘವನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಹೇಳಿದರು. ರೈತರು ನೇರವಾಗಿ ಮನೆಗೆ ಬಂದು ಯಾ–ರಿಗೆ ಮತ ಹಾಕಬೇಕು ಎಂದು ಕೇಳುವ ಮಟ್ಟಿಗೆ ನಂಬಿಕೆ ಗಳಿಸಿದ್ದೇವೆ ಎಂದರು.

ಇದಲ್ಲದೆ, ಎಲ್ಲಾ ಪಕ್ಷದ ಮುಖಂಡರು ಸೇರಿ ಪಕ್ಷಾತೀತ ಪ್ರಗತಿಪರ ರೈತರ ಒಕ್ಕೂಟವನ್ನು ನಿರ್ಮಿಸಿದ್ದು, ಈ ಒಕ್ಕೂಟಕ್ಕೆ ರೈತರು ಬಹುಮತ ನೀಡಿರುವುದು ಸಂತಸದ ವಿಷಯವಾಗಿದೆ ಎಂದು ಹೇಳಿದರು. ಮಾಜಿ ಕಾರ್ಯದರ್ಶಿಯ ಕುತಂತ್ರದಿಂದ ತಮಗೆ ಅನರ್ಹತೆ ಉಂಟಾದರೂ, ನ್ಯಾಯಾಲಯಕ್ಕೆ ಹೋಗುವ ಬದಲು ಯುವಕರಿಗೆ ಅವಕಾಶ ನೀಡುವ ಉದ್ದೇಶದಿಂದ ಸ್ಪರ್ಧೆಯಿಂದ ಹಿಂದೆ ಸರಿದಿರುವುದಾಗಿ ಹೇಳಿದರು. ಕೊನೆಯಲ್ಲಿ, ತಮ್ಮ ಒಕ್ಕೂಟದ ಜಯಕ್ಕೆ ಕಾರಣರಾದ ಎಲ್ಲಾ ರೈತ ಬಂಧುಗಳು ಹಾಗೂ ಮುಖಂಡರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಹನುಮಂತರಾಯ, ಖುರ್ಷಿದ್ ಪಟೇಲ್, ರಾಜ್ ಮಹಮ್ಮದ್ ಸಾಬ್ ಕಾಲೆಗರ್ ಉಪಸ್ಥಿತರಿದ್ದರು.

# ಸಂಭ್ರಮದಿಂದ ಬಸವ ಜಯಂತಿ ಆಚರಣೆ; ಎಡಿಸಿ ಶಿವಾನಂದ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಜಿಲ್ಲಾಡಳಿತದಿಂದ ಕರ್ನಾಟಕದ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಜಯಂತಿಯನ್ನು ಏಪ್ರಿಲ್ 20ರಂದು ಸಂಭ್ರಮದಿಂದ ಆಚರಿಸಲಾಗುವುದು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಶಿವಾನಂದ ಅವರು ತಿಳಿಸಿದರು.ಏಪ್ರಿಲ್ 09ರ ಗುರುವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಬಸವಣ್ಣ ಜಯಂತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.**

ಅಂದು ಬೆಳಿಗ್ಗೆ 9ಗಂಟೆಗೆ ನಗರದ ಬಸವೇಶ್ವರ ವೃತ್ತದಲ್ಲಿ ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು. ನಂತರ ಬೆಳಿಗ್ಗೆ 11ಕ್ಕೆ ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದರು. ಸರ್ಕಾರದ ಮಾರ್ಗಸೂಚಿಯನ್ವಯ ಜಯಂತಿ ಆಚರಣೆ ನಡೆಯಬೇಕು. ಶಿಷ್ಟಾಚಾರ ಅನುಸಾರ ಆಮಂತ್ರಣ ಪತ್ರಿಕೆ ಮುದ್ರಿಸಿ ವಿತ–ರಿಸಬೇಕು. ಜಯಂತಿಗೆ ಆಗಮಿಸುವ ಜನತೆಗೆ ಕುಡಿಯುವ ನೀರು, ಉಪಹಾರ, ಆಸನದ ವ್ಯವಸ್ಥೆ ಮಾಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಜಯಂತಿಯನ್ನು ಜಿಲ್ಲೆಯ ಎಲ್ಲ ಶಾಲಾ–ಕಾಲೇಜುಗಳು ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಆಚರಣೆ ಮಾಡುವಂತೆ ಆದೇಶ ಹೊರಡಿಸಲು ಕ್ರಮ ವಹಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.ಕಾರ್ಯಕ್ರಮದಲ್ಲಿ ಸಮಾಜದ ಮುಖಂಡರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗುವಂತೆ ಅಪರ ಜಿಲ್ಲಾಧಿಕಾರಿಗಳು ಸಭೆಯ ಮೂಲಕ ಸಾರ್ವಜನಿಕರಲ್ಲಿ ಮನವಿ ಮಾಡಿದರು.ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಉತ್ತರಾದೇವಿ, ಸಮಾಜದ ಮುಖಂಡರಾದ ಶಿವಾನಂದ ಚೌಕಿ, ಚಂದ್ರಶೇಖರ ಪಾಟೀಲ ಮಿರ್ಜಾಪುರ, ಪರಮೇಶ್ವರ ಸಾಲಿಮಠ, ನಾಗೇಶ್ವರಪ್ಪ, ಬಸವರಾಜ, ಚೆನ್ನಬಸವಣ್ಣ, ಜೆ.ಬಸವರಾಜ, ಆನಂದ ಪಾಟೀಲ, ಕಲ್ಲಯ್ಯ ಸ್ವಾಮಿ, ವೀರಪ್ಪಣ್ಣ ಗೌಡ ಬಂಡಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಸಭೆಯಲ್ಲಿ ಇದ್ದರು.

# ತೈಲ ನಿಕ್ಷೇಪಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಇರಾನ್ ಮೇಲೆ ಅಮೆರಿಕಾದ ದಾಳಿ

## ಹಿರಿಯ ಪತ್ರಕರ್ತ ಸಿದ್ಧನಗೌಡ ಪಾಟೀಲ್ ಅಭಿಮತ


**ನೈಜ್ಯ ದೆಸೆ ನ್ಯೂಸ್**

**ಯುದ್ದ ಯಾವ ದೇಶದ ಬಡವರ ಪರವೂ ಅಲ್ಲ, ಸ್ವಾತಂತ್ರ್ಯದ ಪರವೂ ಅಲ್ಲ, ಯುದ್ಧ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತದೆ. ಮಧ್ಯಪ್ರಾಚ್ಯದಲ್ಲಿರುವ ಎಲ್ಲ ತೈಲ ನಿಕ್ಷೇಪಗಳನ್ನು ತನ್ನ ನಿಯಂತ್ರಣದಲ್ಲೇ ಇಟ್ಟುಕೊಳ್ಳಬೇಕು ಎಂಬ ದುರುದ್ದೇಶದಿಂದ ಅಮೆರಿಕಾ–ಇಸ್ರೇಲ್ ಸಾಮ್ರಾಜ್ಯಶಾಹಿ ಶಕ್ತಿಗಳು, ಇರಾನ್ ಮೇಲೆ ಸುಳ್ಳು ಆರೋಪ ಹೊರಿಸಿ ಮಿಲಟರಿ ದಾಳಿ ನಡೆಸುತ್ತಿವೆ ಎಂದು ಹೊಸತು ಪತ್ರಿಕೆ ಸಂಪಾದಕ ಹಾಗೂ ಸಿಪಿಐ ರಾಷ್ಟ್ರೀಯ ಮಂಡಳಿ ಸದಸ್ಯ ಸಿದ್ದನಗೌಡ ಪಾಟೀಲ್ ಹೇಳಿದರು.**

ನಗರದ ಬಸವ ಚಾರಿಟೇಬಲ್ ಟ್ರಸ್ಟ್ ನಲ್ಲಿ ಗುರುವಾರ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಮನುಜಮತ ಬಳಗದ ವತಿಯಿಂದ ಹಮ್ಮಿಕೊಂಡಿದ್ದ "ಯುದ್ಧ ಮತ್ತು ಜಾಗತಿಕ ತಲ್ಲಣಗಳು" ಎಂಬ ವಿಷಯದ ಕುರಿತು ಮಾತನಾಡುತ್ತಾ, ಅಮೆರಿಕಾ ಪೆಂಟಗಾನ್ ಎನ್ನುವಂತಹ ಯುದ್ಧದ ಕೈಗಾರಿಕೆಯನ್ನೇ ನಡೆಸುತ್ತಿದೆ. ಯುದ್ಧ ಜಾಸ್ತಿಯಾದಷ್ಟು ಆ ಕಂಪನಿಗೆ ಲಾಭ. ಹಾಗಾಗಿ ದೇಶ ದೇಶಗಳ ನಡುವೆ ಅಮೆರಿಕಾ ಯುದ್ಧವನ್ನು ಹುಟ್ಟುಹಾಕಿ, ಯುದ್ಧ ಮಾಡುವ ಎರಡೂ ದೇಶಗಳಿಗೆ ಈ ಕಂಪನಿ ಶಸ್ತ್ರಾಸ್ತ್ರಗಳನ್ನು ಮಾರಾಟ ಮಾಡುತ್ತದೆ. ಇದು ಸಾಮ್ರಾಜ್ಯಶಾಹಿಯ ವ್ಯವಸ್ಥಿತ ಪಿತೂರಿಯಾಗಿದೆ ಎಂದು ವಿಶ್ಲೇಷಿಸಿದರು.

ಶ್ರೀಮಂತ ಅಥವಾ ಬಂಡವಾಳಶಾಹಿ ರಾಷ್ಟ್ರಗಳು ನೈಸರ್ಗಿಕ ಸಂಪತ್ತಿನಿಂದ ಕೂಡಿದ ರಾಷ್ಟ್ರಗಳನ್ನು ಲೂಟಿ ಮಾಡಲು ಯುದ್ಧವನ್ನು ಅಸ್ತ್ರ ಮಾಡಿಕೊಂಡಿವೆ, ಇರಾನ್ ಮೇಲೆ ಅಮೆರಿಕಾ ನಡೆಸುತ್ತಿರುವ ದಾಳಿಯು ಸಾಮ್ರಾಜ್ಯಶಾಹಿಯ ದುರಾಸೆಯಾಗಿದೆ. ಇರಾನ್ ತೈಲ ನಿಕ್ಷೇಪವನ್ನು ಕೊಳ್ಳೆ ಹೊಡೆಯಲು ಅಮೆರಿಕಾ ಈ ಯುದ್ಧವನ್ನು ಹುಟ್ಟು ಹಾಕಿದೆ. ಈ ಯುದ್ದ ಸ್ವತಂತ್ರ್ಯ ಪ್ರಿಯರು ಹಾಗೂ ಸಾಮ್ರಾಜ್ಯಶಾಹಿ ಪ್ರಿಯರ ನಡುವಿನ ಯುದ್ಧವಾಗಿದೆ ಎಂದರು.

ಅಮೆರಿಕಾದ ನಡೆ ಅಮಾನವೀಯ: ಯುದ್ಧ ಆರಂಭವಾದಾಗ ಅಮೆರಿಕಾ ಒಂದು ವಾರದಲ್ಲಿ ಇರಾನ್‌ನ್ನು ಸೋಲಿಸಿ ಯುದ್ಧ ಮುಗಿಸುವ ವಿಶ್ವಾಸವನ್ನು ಹೊಂದಿತ್ತು. ಆದರೆ ತದನಂತರ ನಡೆದ ಬೆಳವಣಿಗೆಗಳಲ್ಲಿ ಇರಾನ್ ಸೋಲೊಪ್ಪಿಕೊಳ್ಳದೇ ಪ್ರತಿರೋಧವೊಡ್ಡಿದ್ದು, ಅಮೆ–ರಿಕಾ ಮತ್ತು ಇಸ್ರೇಲ್‌ನ್ನು ದಂಗುಬಡಿಸಿತು. ಹಾಗಾಗಿ ಒಪ್ಪಂದಕ್ಕಾಗಿ ಎರಡೂ ದೇಶಗಳು ಗೋಗರಿಯುತ್ತಿವೆ.



ಯುದ್ಧದ ನೀತಿಯನ್ನು ಮರೆತ ಅಮೆರಿಕಾ ಇರಾನ್‌ನ ಆಸ್ಪತ್ರೆ, ಶಾಲೆ ಸೇರಿದಂತೆ ಜನ ವಸತಿ ಮೇಲೆ ಮಿಲಟರಿ ದಾಳಿ ನಡೆಸುವ ಮೂಲಕ ಮುಗ್ದ ಜನರ ಸಾವಿಗೆ ಕಾರಣವಾಗಿದೆ. ಅಮೆರಿಕದ ಟ್ರಂಪ್ ಇರಾನ್ ನಾಮಾವಶೇಷ ಆಗುವಂತೆ ಬಾಂಬ್ ದಾಳಿ ನಡೆಸುವುದಾಗಿ ಬಹಿರಂಗವಾಗಿ ಬೆದರಿಕೆ ಹಾಕುತ್ತಿದ್ದಾರೆ. 6 ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಇರಾನ್ ಮೇಲೆ, ಅಲ್ಲಿನ ಮಾನವ ಸಮುದಾಯದ ಮೇಲೆ ಇಷ್ಟೊಂದು ದ್ವೇಷ ಸಾಧಿಸುವುದು ಹೇಯ ಕೃತ್ಯವಾಗಿದೆ. ಅಮೆ–ರಿಕಾದ ಈ ಅಮಾನವೀಯ ನಡೆಯು ಖಂಡನಾರ್ಹವಾಗಿದೆ ಎಂದು ಸಿದ್ಧನಗೌಡ ಪಾಟೀಲ್ ಹೇಳಿದರು. ಭಾರತ ಮೌನವಾಗಿರುವುದು ಎಷ್ಟು ಸರಿ ಇರಾನ್ ಮೇಲೆ ಅಮೆರಿಕಾ ಮತ್ತು ಇಸ್ರೇಲ್ ನಡೆಸುತ್ತಿರುವ ದಾಳಿಯನ್ನು ವಿಶ್ವಸಂಸ್ಥೆಯಲ್ಲಿ ಚೀನಾ, ರಷ್ಯಾ ವಿರೋಧಿಸುತ್ತಿದೆ. ಇಡೀ ಜಗತ್ತೇ ಇದನ್ನು ವಿರೋಧಿಸಬೇಕಿದೆ. ಆದರೆ ಭಾರತ ಮೌನ ವಹಿಸಿದೆ. ಭಾರತ 1969ರಲ್ಲಿ ಆಲಿಪ್ತ ನೀತಿ ಚಳವಳಿ ಪ್ರತಿಪಾದಿಸಿತ್ತು.

ವಿಯೇಟ್ನಾಂ ಮೇಲೆ ಅಮೆರಿಕಾ ದಾಳಿ ನಡೆಸಿದಾಗ ಭಾರತ ಅಮೆರಿಕಾದ ನೀತಿಯನ್ನು ಖಂಡಿಸಿತ್ತು. ದಕ್ಷಿಣ ಆಫ್ರಿಕಾದಲ್ಲಿ ಇಂಗ್ಲೆಂಡ್ ವಿರುದ್ಧ ಹೋರಾಟ ನಡೆದಾಗ ಭಾರತ ದಕ್ಷಿಣ ಆಫ್ರಿಕಾದ ಪರ ಧ್ವನಿ ಎತ್ತಿತ್ತು. ಕ್ಯೂಬಾದಲ್ಲಿ ಅಮೆರಿಕಾದ ವಿರುದ್ಧ ಹೋರಾಟ ನಡೆದಾಗ ಕ್ಯೂಬಾವನ್ನು ಭಾರತ ಬೆಂಬಲಿಸಿತ್ತು. ಭಾರತ ಬಡ ದೇಶಗಳ ಸ್ವಾತಂತ್ರಕ್ಕಾಗಿ ಹೋರಾಟ ಮಾಡುವಂತಹ, ಅಂತಹ ದೇಶಗಳಿಗೆ ನಾಯಕತ್ವ ಕೊಟ್ಟಂತಹ ದೇಶವಾಗಿದೆ. ಇಂತಹ ಭವ್ಯ ಪರಂಪರೆಯನ್ನು ಹೊಂದಿದಂತಹ ದೇಶ, ಬಡ ದೇಶಗಳ ಪರವಾಗಿ ಈ ಹಿಂದೆ ಧ್ವನಿ ಎತ್ತಿದ ದೇಶದ ಪ್ರಧಾನಿಗಳು ಈ ಹಿಂದೆ ನಡೆದ ಅಮೆ–ರಿಕಾದ ಚುನಾವಣೆಯಲ್ಲಿ "ಅಬ್ ಕಾ ಬಾರ್ ಟ್ರಂಪ್ ಸರ್ಕಾರ್" ಎಂದು ಹೇಳಿದ್ದು ನಾಚಿಕೆಗೇಡಿತನದ ಸಂಗತಿಯಾಗಿದೆ.

ಅಲ್ಲದೇ ವೆನೆಜುವೆಲಾ ಅಧ್ಯಕ್ಷ ಮತ್ತು ಅಧ್ಯಕ್ಷರ ಪತ್ನಿಯನ್ನು ಅಮೆರಿಕಾ ಬಂಧಿಸಿದಾಗ, ಗಾಜಾಪಟ್ಟಿ ಮೇಲೆ ಇಸ್ರೇಲ್ ದಾಳಿ ಮಾಡಿದಾಗ ಈ ದೇಶದ ಪ್ರಧಾನಿಗಳು, ರಾಜತಾಂತ್ರಿಕರು ಮೌನವಾಗಿರುವುದು ವಿಪರ್ಯಾಸವಾಗಿದೆ ಎಂದು ಸಿದ್ದನಗೌಡ ಪಾಟೀಲ್ ಅಸಮಾಧಾನ ವ್ಯಕ್ತಪಡಿಸಿದರು.

"ಪತ್ರಕರ್ತರು ಅಭಿಪ್ರಾಯ ರೂಪಿಸಲಿ" ಜಗತ್ತಿನ ಎಲ್ಲ ಯುದ್ಧಗಳಲ್ಲಿ ಯುದ್ಧಭೂಮಿಗೆ ತೆರಳಿ ವರದಿ ಮಾಡಲು ಹೋದ ಬಹಳಷ್ಟು ಪತ್ರಕರ್ತರು, ಛಾಯಾಗ್ರಾಹಕರು ಜೀವ ಕಳೆದುಕೊಂಡಿದ್ದಾರೆ. ಇಸ್ರೇಲ್–ಪ್ಯಾಲಿಸ್ತೇನ್ ನಡುವಿನ ಯುದ್ಧದಲ್ಲಿ ಗಾಜಾಪಟ್ಟಿಯಲ್ಲಿ 56 ಪತ್ರಕರ್ತರು ತೀರಿ ಹೋಗಿದ್ದಾರೆ. ಪತ್ರಕರ್ತರು ವರದಿ ಮಾಡುವುದಷ್ಟೇ ಮುಖ್ಯ ಅಲ್ಲ, ಅಭಿಪ್ರಾಯ ರೂಪಿಸುವುದು ಮುಖ್ಯ. ಇತ್ತೀಚಿನ ದಿನಗಳಲ್ಲಿ ಕಾರ್ಪೋರೇಟ್ ಮೀಡಿಯಾಗಳ ಹಾವಳಿಯಿಂದಾಗಿ ಸತ್ಯವನ್ನು ಮರೆಮಾಚಲಾಗುತ್ತಿದೆ. ಕೆಲವು ಮೀಡಿಯಾಗಳು ಬಂಡವಾಳಿಗರ, ಆಡಳಿತಾರೂಢರ ತುತ್ತೂರಿಗಳಾಗಿ ಮಾರ್ಪಟ್ಟಿದ್ದು, ಜನರ ಹಿತವನ್ನು ಸಂಪೂರ್ಣ ಮರೆತಿವೆ



ಎಂದು ಸಿದ್ದನಗೌಡ ಪಾಟೀಲ್ ಕಳವಳ ವ್ಯಕ್ತಪಡಿಸಿದರು.

"ಯುದ್ಧಕ್ಕೆ ಪೂರ್ಣವಿರಾಮ ಬೀಳಲಿ" ಇಸ್ರೇಲ್, ಅಮೆರಿಕಾ ಹಾಗೂ ಇರಾನ್ ನಡುವಿನ ಯುದ್ಧ ನಿಂತಿಲ್ಲ, ಎರಡು ವಾರ ಸ್ಥಗಿತಗೊಂಡಿದೆ ಅಷ್ಟೇ, ಎರಡು ವಾರಗಳ ನಂತರ ಏನಾಗುತ್ತೋ ಊಹಾತೀತ. ಇಡೀ ಜಗತ್ತನ್ನೇ ಗೆಲ್ಲಬೇಕೆಂಬ ದುರಾಸೆ ಹೊಂದಿದ್ದ ಜರ್ಮನಿಯ ಹಿಟ್ಲರ್ 1937ರಲ್ಲಿ ಯುದ್ಧ ಆರಂಭಿಸಿದ. ಹಿಟ್ಲರ್‌ನ ಯುದ್ಧದಾಹಿ ನೀತಿಯ ಮುನ್ನೆಚ್ಚರಿಕೆಗಾಗಿ ರಷ್ಯಾದ ಸ್ಟ್ಯಾಲಿನ್ ಹಿಟ್ಲರ್‌ನೊಂದಿಗೆ ಪೋಲೆಂಡ್ ಒಪ್ಪಂದ ಮಾಡಿಕೊಂಡ. ಕೊನೆಗೆ ರೆಡ್‌ಆರ್ಮಿಗೆ ಹಿಟ್ಲರ್‌ನ ಸೈನ್ಯ ಸೋತು ಹೋಯಿತು. ಅಮೆರಿಕಾ–ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ದ ವಿರಾಮ ಕಂಡಿದೆ. ಈ ವಿರಾಮ ಅಲ್ಪವಿರಾಮವಾಗದೇ, ಪೂರ್ಣವಿರಾಮವಾಗಲಿ. ಯುದ್ಧ ಆರಂಭಿಸಿದವರೇ ಯುದ್ಧ ನಿಲ್ಲಿಸಲು ಪ್ರಸ್ತಾವನೆ ಇಟ್ಟಿರುವುದು ವಿಚಿತ್ರ.

ಪ್ರಪಂಚದ ಯಾವುದೇ ದೇಶಗಳಿರಲಿ ಪರಸ್ಪರ ಅವಲಂಬಿಸಿವೆ. ಅವಲಂಬಿತ ಜಗತ್ತಿನಿಂದಾಗಿ ಯಾವುದೇ ದೇಶದಲ್ಲಿ ಉಂಟಾದ ಬದಲಾವಣೆ ಇತರೆ ದೇಶಗಳ ಮೇಲೆಯೂ ಪರಿಣಾಮ ಬೀರುತ್ತದೆ. ಮಧ್ಯ ಪ್ರಾಚ್ಯದ ನಡುವಿನ ಯುದ್ಧದಿಂದಾಗಿ ಆರಂಭದಲ್ಲಿ ನಮ್ಮ ದೇಶದಲ್ಲಿ ಅಡುಗೆ ಅನಿಲ ಕೊರತೆ ಉಂಟಾಗಿದೆ. ಮಧ್ಯ ಪ್ರಾಚ್ಯದ ಬಿಕ್ಕಟ್ಟು ಮುಂದುವರಿದದ್ದೇ ಆದಲ್ಲಿ ದೇಶದಲ್ಲಿ ಇಂಧನ ಬಿಕ್ಕಟ್ಟು, ಕೃಷಿ ಬಿಕ್ಕಟ್ಟು, ರಸಗೊಬ್ಬರದ ಬಿಕ್ಕಟ್ಟು ಹೀಗೆ ಹತ್ತು ಹಲವು ಸಂಕಷ್ಟಗಳು ಎದುರಾಗುವುದರಲ್ಲಿ ಅನುಮಾನವಿಲ್ಲ ಎಂದು ಅವರು ವಿವರಿಸಿದರು.

ಯುದ್ಧಗಳಿಂದ ಸ್ವಾತಂತ್ರ್ಯ ಸೌರ್ವಭೌಮತೆಗೆ ಧಕ್ಕೆ: ಈಗಾಗಲೇ ಮಧ್ಯ ಪ್ರಾಚ್ಯದಲ್ಲಿ ಕೆಲಸ ಮಾಡುತ್ತಿರುವ ಬಾರತೀಯ ವಲಸೆ ಕಾರ್ಮಿಕರು ನಿರುದ್ಯೋಗಿಗಳು ಆಗಿದ್ದಾರೆ. ಯುದ್ಧಗಳಿಂದ ಸ್ವಾತಂತ್ರ್ಯ ಸೌರ್ವಭೌಮತೆಗೆ ಧಕ್ಕೆಯಾಗುತ್ತದೆ. ಅಮೆರಿಕಾದೊಂದಿಗೆ ಭಾರತ ಮಾಡಿಕೊಂಡಿರುವ ಇತ್ತೀಚಿನ ಒಪ್ಪಂದಗಳು ಸಾಮ್ರಾಜ್ಯಶಾಹಿ ಒಪ್ಪಂದಗಳಾಗಿದ್ದು, ದೇಶದ ಜನರ ಹಿತವನ್ನು ಸಂಪೂರ್ಣ ಕಡೆಗಣಿಸಲಾಗಿದೆ. ಟ್ರಂಪ್ ಇರಾನ್ ಮೇಲೆ ನಡೆಸುತ್ತಿರುವ ದಾಳಿ ಇರಾನ್ ದೇಶದ ಮೇಲಷ್ಟೇ ಅಲ್ಲ, ಸಾರ್ವಭೌಮ ಸ್ವಾತಂತ್ರ್ಯದ ಮೇಲೆ ನಡೆಸುತ್ತಿರುವ ದುರ್ದಾಳಿಯಾಗಿದೆ.

ಪ್ರತಿಯೊಬ್ಬ ದೇಶ ವಾಸಿಗೆ ವಸಾಹತು ವಿರೋಧಿ ಪ್ರಜ್ಞೆ ಇರಬೇಕು. ಈ ಹಿಂದೆ ಬ್ರಿಟಿಷರ ವಿರುದ್ಧ ನಮ್ಮ ದೇಶದಲ್ಲಿ ಚಲೇಜಾವ್ ಚಳವಳಿ ನಡೆದಿತ್ತು. ಆದರೆ ಇಂದು ಆಡಳಿತಾರೂಢ ಪ್ರಭುತ್ವಗಳು "ಚಲೇ ಆವ್ ಆವ್" ಎನ್ನುತ್ತ ದೇಶದ ಸಂಪತ್ತು ಕೊಳ್ಳೆ ಹೊಡೆಯಲು, ಬಂಡವಾಳ ಹೂಡಲು ಬನ್ನಿ ಎಂದು ಬಹುರಾಷ್ಟ್ರೀಯ ಕಂಪನಿಗಳು ಕೈಬೀಸಿ ಕರೆಯುತ್ತಿವೆ. ಯುದ್ಧ ಯಾವ ದೇಶದ ಬಡವರ ಪರ ಅಲ್ಲ, ಸ್ವಾತಂತ್ರ್ಯದ ಪರ ಅಲ್ಲ, ಯುದ್ಧ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತದೆ. ಶ್ರೀಮಂತ ಅಥವಾ ಬಂಡವಾಳಶಾಹಿ ರಾಷ್ಟ್ರಗಳು ಜಗತ್ತನ್ನೇ ಲೂಟಿ ಮಾಡಲು ಯುದ್ಧವನ್ನು ಅಸ್ತ್ರ ಮಾಡಿಕೊಂಡಿವೆ. ಯುಎನ್‌ಓ ಅಮೆರಿಕನ್ ಸಾಮ್ರಾಜ್ಯಶಾಹಿಯ ಕೈಗೊಂಬೆಯಾಗಿದೆ ಎಂದು ಸಿದ್ದನಗೌಡ ಪಾಟೀಲ್ ಹೇಳಿದರು. ಪ್ರಾಸ್ತಾವಿಕವಾಗಿ ಹಿರಿಯ ಪತ್ರಕರ್ತ ಡಿ. ಎಚ್.ಕಂಬಳಿ ಮಾತನಾಡಿದರು.

ಶರಣಪ್ಪ ಕೆ.ಗೋನಾಳ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಅಮರೇಶ ಅಲಬನೂರು ನಿರೂಪಿಸಿದರು. ಮನುಜಮತ ಬಳಗದ ಪ್ರಧಾನ ಕಾರ್ಯದರ್ಶಿ ಬಸವರಾಜ ಬಾದರ್ಲಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ರಾಜ್ಯ ಮಾಧ್ಯಮ ಅಕಾಡೆಮಿ ಸದಸ್ಯ ಕೆ.ನಿಂಗಜ್ಜ ಗಂಗಾವತಿ, ಮನುಜಮತ ಬಳಗದ ಉಪಾಧ್ಯಕ್ಷ ಖಾದರ್‌ಸುಭಾನಿ, ಮಾಬುಸಾಹುಕಾರ ಮುಳ್ಳೂರು, ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷ ಅಶೋಕ ಬೆನ್ನೂರು, ಕಾರ್ಮಿಕ ಮುಖಂಡ ವೆಂಕನಗೌಡ ಗದ್ರಟಗಿ, ಅಂಗನವಾಡಿ ಫೆಡರೇಷನ್‌ನ ಜಿಲ್ಲಾಧ್ಯಕ್ಷೆ ಸುಲೋಚನಾ ಸೇರಿದಂತೆ ಇನ್ನಿತರರಿದ್ದರು.

**ಸನ್ಮಾನ:** ಕರ್ನಾಟಕ ರಾಜ್ಯ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಚಂದ್ರಶೇಖರ ಬೆನ್ನೂರು ಅವರನ್ನು ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಮನುಜಮತ ಬಳಗದ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು.

# ಶಿಕ್ಷಣ ಮಾರ್ಗದರ್ಶಿ ವಿಶೇಷ

## ಬಿ ಟೆಕ್ ಫಾರ್ಮಾಸ್ಯುಟಿಕಲ್ ಇಂಜಿನಿಯರಿಂಗ್


ಬಿ ಟೆಕ್ ಫಾರ್ಮಾಸ್ಯುಟಿಕಲ್ ಇಂಜಿನಿಯರಿಂಗ್‌ನಲ್ಲಿ B.Tech (B.Tech in Pharmaceutical Engineering) ಎಂಬುದು 4 ವರ್ಷಗಳ ಪದವಿ ಕೋರ್ಸ್ ಆಗಿದೆ. ಇದು ರಾಸಾಯನಿಕ ಇಂಜಿನಿಯರಿಂಗ್ ಮತ್ತು ಫಾರ್ಮಾ ವಿಜ್ಞಾನವನ್ನು ಸಂಯೋಜಿಸಿ ಔಷಧ ತಯಾರಿಕೆ, ಗುಣಮಟ್ಟ ನಿಯಂತ್ರಣ ಮತ್ತು ವಿನ್ಯಾಸವನ್ನು ಕಲಿಸುತ್ತದೆ. ಕರ್ನಾಟಕದ ಕಿಷ್ಕಿಂಧಾ ವಿಶ್ವವಿದ್ಯಾಲಯ (ಬಳ್ಳಾರಿ) ಈ ಕೋರ್ಸ್ ಅನ್ನು ನೀಡುತ್ತದೆ. ಕೋರ್ಸ್ ಮುಖ್ಯಾಂಶಗಳು (Course Highlights): ಅರ್ಹತೆ: 10+2 ಅಥವಾ 2ನೇ ಪಿಯುಸಿಯಲ್ಲಿ ಭೌತಶಾಸ್ತ್ರ (Physics), ರಸಾಯನಶಾಸ್ತ್ರ (Chemistry), ಮತ್ತು ಗಣಿತ/ಜೀವಶಾಸ್ತ್ರ (Maths/Bio) ವಿಷಯಗಳಲ್ಲಿ ಕನಿಷ್ಠ 45% (SC/ST ವರ್ಗದವರಿಗೆ 40%) ಅಂಕಗಳನ್ನು ಪಡೆದಿರಬೇಕು. ಉದ್ಯೋಗಾವಕಾಶಗಳು: ಔಷಧ ತಯಾರಿಕೆ ಘಟಕಗಳು, ಆರ್ ಅಂಡ್ ಡಿ (ಖ&ಆ) ಲ್ಯಾಬ್‌ಗಳು, ಮತ್ತು ಗುಣಮಟ್ಟ ನಿಯಂತ್ರಣ (Quality Control) ವಿಭಾಗಗಳಲ್ಲಿ ಕೆಲಸ. ಉದ್ಯೋಗದ ಪಾತ್ರಗಳು: ಫಾರ್ಮಾಕೋಲಜಿಸ್ಟ್, ಡ್ರಗ್ ಇನ್ಸ್‌ಪೆಕ್ಟರ್, ಪ್ರೊಸೆಸ್ ಇಂಜಿನಿಯರ್. ವೇತನ: ಆರಂಭಿಕ ವೇತನವು ವಾರ್ಷಿಕ ಸುಮಾರು 5 ಲಕ್ಷದಿಂದ 7 ಲಕ್ಷದವರೆಗೆ ಇರಬಹುದು. ಮುಖ್ಯ ವಿವರಗಳು: ಅವಧಿ: 4 ವರ್ಷಗಳು (8 ಸೆಮಿಸ್ಟರ್‌ಗಳು). ಬೋಧನಾ ವಿಷಯಗಳು: ಡ್ರಗ್ ಫಾರ್ಮುಲೇಷನ್, ಫಾರ್ಮಾಸ್ಯುಟಿಕಲ್ ಮ್ಯಾನುಫ್ಯಾಕ್ಚರಿಂಗ್, ಕ್ವಾಲಿಟಿ ಅಶ್ಯೂರೆನ್ಸ್. ಅನ್ವಯಿಸುವಿಕೆ: ಹೈದರಾಬಾದ್-ಕರ್ನಾಟಕ ಪ್ರದೇಶದ ವಿದ್ಯಾರ್ಥಿಗಳಿಗೆ ಕಿಷ್ಕಿಂಧಾ ವಿಶ್ವವಿದ್ಯಾಲಯದಲ್ಲಿ ಪ್ರವೇಶಾವಕಾಶವಿದೆ.




## ಮಹಾತ್ಮರ ಬದುಕು ನಮಗೆ ದಾರಿ ದೀಪ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಮಹಾತ್ಮರು ದಾರ್ಶನಿಕರು ಶರಣರು ನಮ್ಮನ್ನು ಅಜ್ಞಾನದ ಕತ್ತಲೆಯಿಂದ ಸುಜ್ಞಾನದ ಬೆಳಕಿನೆಡೆಗೆ ತರುತ್ತಾರೆ. ಅವರ ಜೀವನ ಚರಿತ್ರೆ ತಿಳಿದುಕೊಳ್ಳುವ ಪ್ರಯತ್ನ ನಾವೆಲ್ಲರೂ ಮಾಡಬೇಕು. ಅವರ ಆದರ್ಶ ಬದುಕು ನಮಗೆ ದಾರಿದೀಪವಾಗಿದೆ ಎಂದು ನಾವದಗಿ ಬ್ರಹನ್ಮಠದ ಷ.ಬ್ರ. ಶ್ರೀ ರಾಜಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯ ಮಹಾ ಸ್ವಾಮಿಗಳು ಹೇಳಿದರು.**



ತಾಲೂಕಿನ ಸುಕ್ಷೇತ್ರ ಶಳ್ಳಗಿ ಗ್ರಾಮದಲ್ಲಿ ಶ್ರೀ ಬಸವಂತ್ರಾಯ ಹಾಗೂ ಶ್ರೀ ಪರಮಣ್ಣ ಮುತ್ಯಾ ದೇವಸ್ಥಾನದ 2ನೇ ವರ್ಷದ ಜಾತ್ರಾ ಮಹೋತ್ಸವ ನಿಮಿತ್ಯವಾಗಿ ಬುಧವಾರ ಹಮ್ಮಿಕೊಂಡ ಕಲ್ಬುರ್ಗಿ ಶ್ರೀ ಶರಣ ಬಸವೇಶ್ವರ ಪುರಾಣ ಪ್ರಾರಂಭೋತ್ಸವ ಸಮಾರಂಭದ ಪಾವನ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ಶಳ್ಳಗಿ ಸುಕ್ಷೇತ್ರದಲ್ಲಿ ಈ ಇಬ್ಬರು ಮಹಾನ್ ಶರಣರು ಅದಮ್ಯ ಆಧ್ಯಾತ್ಮಿಕ ಶಕ್ತಿಯನ್ನು ಹೊಂದಿವರಾಗಿದ್ದರು. ಭಕ್ತರು ಬೇಡಿದ ಇಷ್ಟಾರ್ಥಗಳನ್ನು ಕ್ಷಣಾರ್ಧದಲ್ಲಿ ಈಡೇರಿಸುವಂಥಹ ಪವಾಡ ಪುರುಷರಾಗಿದ್ದರು. ಕಳೆದ ಎರಡು ವರ್ಷಗಳಿಂದ ಈ ಕಾರ್ಯಕ್ರಮವನ್ನು ತಾವು ಮುನ್ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯವಾಗಿದೆ ಎಂದರು.ಮಾಗಣಗೇರಿಯ ಷ.ಬ್ರ.ಡಾ. ವಿಶ್ವರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ಎಲ್ಲರೂ ಧರ್ಮ ಮಾರ್ಗದಲ್ಲಿ ನಡೆಯುವಂತವರಾಗಬೇಕು. ಆಧ್ಯಾತ್ಮಿಕ ಒಲವು ಬೆಳೆಸಿಕೊಳ್ಳಿ, ಇಂತಹ ಪುರಾಣ ಪ್ರವಚನಗಳ ಮೂಲಕ ಮಹಾತ್ಮರ ಜೀವನವನ್ನು ತಿಳಿದುಕೊಳ್ಳುವುದರಿಂದ ಬದುಕು ಸಾರ್ಥಕವಾಗುತ್ತದೆ. ನಾನು ಎರಡು ವರ್ಷಗಳ ಹಿಂದೆ ದೇವಸ್ಥಾನದ ಉದ್ಘಾಟನೆಗೆ ಬಂದಾಗ ಹೇಳಿದ ಮಾತನ್ನು ನೀವು ಚಾಚು ತಪ್ಪದೇ ನಡೆಸಿಕೊಂಡು ಬರುತ್ತಿದ್ದೀರಿ ಜಾತ್ರೆ ಪುರಾಣ ಪ್ರವಚನಗಳು ನಮ್ಮ ಮಧ್ಯ ಪ್ರೀತಿ ವಿಶ್ವಾಸ ಹಾಗೂ ಭಾತೃತ್ವವನ್ನು ಬೆಳೆಸುತ್ತವೆ ಈ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಿ ಎಂದು ಸಲಹೆ ನೀಡಿದರು. ಪುರಾಣಿಕ ವೇದ ಮೂರ್ತಿ ಬಸಯ್ಯ ಸೋಮಶೇಖರ ಮಠ(ಯಾಳಗಿ) ಅವರು ಮೊದಲು ದಿನದ ಪುರಾಣದಲ್ಲಿ ಶ್ರೀ ಶರಣ ಬಸವೇಶ್ವರರ ಬಾಲ್ಯದ ಕುರಿತು ವಿವರಿಸಿದರು. ವೇ.ಮೂ.ಮಲ್ಲಯ್ಯ ಹಿರೇಮಠ ಸಾನಿಧ್ಯ ವಹಿಸಿದ್ದರು. ಎಪಿಎಂಸಿ ಮಾಜಿ ಅಧ್ಯಕ್ಷ ಕೆ ಕೆ ನಾಡಗೌಡ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ವೇದ ಮೂರ್ತಿ ಮಲ್ಲಯ್ಯಸ್ವಾಮಿ ಹಿರೇಮಠ, ಮಲ್ಲಯ್ಯ ಸ್ವಾಮಿ ಆರ್ ಮಠ, ಪರಮಣ್ಣ ಶರಣರು, ಗೌರವಾಧ್ಯಕ್ಷ ಕೆ ಸಿ ದೇಸಾಯಿ, ದತ್ತಣ್ಣ ದೇಸಾಯಿ, ಬಸನಗೌಡ ನಾಡಗೌಡ, ವಿಶ್ವನಾಥ್ ರೆಡ್ಡಿ ನಾಡಗೌಡ, ಗುರಣ್ಣ ಚಿಂಚೋಳಿ, ರಾಮನಗೌಡ ದೇಸಾಯಿ, ಉತ್ತನಗೌಡ ನಾಡಗೌಡ, ಶಾಂತಗೌಡ ಬಂಟನೂರ, ಮುದುಕಪ್ಪ ಪೂಜಾರಿ, ಸಾಹಿತಿ ಬಸವರಾಜ ಗೊರಜಿ (ಕೊಡಗಾನೂರ), ಶರಣಗೌಡ ಪಾಟೀಲ(ಕರಿಭಾವಿ) ಮತ್ತಿತರರು ಇದ್ದರು.

## ನಿವೃತ್ತಿ ಹೊಂದಿದ ಅಂಗನವಾಡಿ ಕಾರ್ಯಕರ್ತೆಯರ ಗ್ರಾಚುಟಿ ಹಣ ಬಿಡುಗಡೆಗೆ ಒತ್ತಾಯ



ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: 2011ರಿಂದ 2022 ರವರೆಗೆ ನಿವೃತ್ತಿ ಹೊಂದಿದ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಗ್ರಾಚುಟಿ ಹಣ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ (ಸಿಐಟಿಯು ಸಂಯೋಜಿತ) ನೌಕರರು ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿದರು.**

2023 ರಿಂದ ಸಹಾಯಕಿಯರಿಗೆ ಬರಬೇಕಾದ ಮಾತೃವಂದನಾ ಪ್ರೋತ್ಸಾಹಧನ ಮತ್ತು ಕಾರ್ಯಕರ್ತೆಯರಿಗೆ 2025 ರ ಮಾತೃ ವಂದನಾ ಪ್ರೋತ್ಸಾಹ ಧನ ಬಿಡಗಡೆ ಮಾಡಬೇಕು. ಕಾರ್ಯಕರ್ತೆಯರಿಗೆ ಬಿಎಲ್‌ಒ ಕೆಲಸ, ಎಫ್‌ಆರ್‌ಎಸ ಕೆಲಸ ಮತ್ತು ಬೇರೆ ಇಲಾಖೆ ಕೆಲಸಗಳ ಒತ್ತಡದಿಂದ ಅನಾರೋಗ್ಯದಿಂದ ಬಳಲುವಂತಾಗಿದೆ. ಕಾರಣ ಸದರಿ ಕೆಲಸಗಳಿಂದ ಮುಕ್ತಗೊಳಿಸಬೇಕು. ಪ್ರತಿ ತಿಂಗಳು ಕೇಂದ್ರಗಳ ಬೇಡಿಕೆಗಳಿಗೆ ತಕ್ಕಂತೆ ಉತ್ತಮ ಗುಣಮಟ್ಟದ ರೇಷನ್ ಬೆಲ್ಲ, ರವ, ಹಾಲಿನ ಪೌಡರ್ ಪೂರೈಸಬೇಕು.

ಮೊಟ್ಟೆಗಳ ಖರೀದಿಗೆ ಹಣ ಬಿಡುಗಡೆ ಮಾಡಬೇಕು. ಗುಣಮಟ್ಟದ ಸಮವಸ್ತ್ರ ನೀಡಬೇಕು. 2005 ರ ಬಾಲ ಭವನ, 2017 ರ ಸ್ತ್ರೀ ಶಕ್ತಿ ಭವನ, ಇಲಾಖೆ ಕಟ್ಟಡ ನಿರ್ಮಿಸಲು ಆದೇಶ ನೀಡಬೇಕು. 2020 ರಿಂದ ಕಾರ್ಯಕರ್ತೆಯರು, ಸಹಾಯಕಿಯರಿಗೆ ಗೌರವಧನ ಧನ ನೀಡಬೇಕೆಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷೆ ಸರಸ್ವತಿ ಈಚನಾಳ, ಗೌರವಾಧ್ಯಕ್ಷೆ ಲಕ್ಷ್ಮೀ ನಗನೂರು, ಕಾರ್ಯದರ್ಶಿ ಮಹೇಶ್ವರಿ ಹಟ್ಟಿ, ಮಲ್ಲಯ್ಯ ಹೊನ್ನಳ್ಳೆ, ಸುಮಿತ್ರಾ ಗುರುಗುಂಟಾ, ಸಾವಿತ್ರಿಭೂಪುರ, ಹನುಮಂತ, ಹನುಮನಗೌಡ, ಮಲ್ಲನಗೌಡ ಪಾಟೀಲ್ ಇದ್ದರು.

## ಪಿಯುಸಿ ವಿಜ್ಞಾನ ವಿಭಾಗದಲ್ಲಿ ಸಂಗೀತಾ ಆರ್ ಮಾಣಿಕ್ ಡಿಸ್ಟಿಂಕ್ಷನ್

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಪಟ್ಟಣದ ಉಮಾ ಮಹೇಶ್ವರಿ ಕಾಲೇಜಿನ ಪಿಯುಸಿ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡುತಿದ್ದ ಕುಮಾರಿ ಸಂಗೀತಾ ಆರ್ ಮಾಣಿಕ್ ಇವರು 600 ಅಂಕ ಕ್ಕೆ 506 ಅಂಕಗಳನ್ನು ಪಡೆಯುವ ಮೂಲಕ ಡಿಸ್ಟಿಂಕ್ಷನ್ ನಲ್ಲಿ ಪಾಸಾಗಿದ್ದಾರೆ.**

**ಪತ್ರಕರ್ತ ರಾಜೇಶ್ ಮಾಣಿಕ್ ರವರ ಹಿರಿಯ ಸುಪುತ್ರಿ ಯ ಸಾಧನೆಗೆ ಪಾಲಕರು ಸಂತೋಷ ವ್ಯಕ್ತಪಡಿಸಿದ್ದಾರೆ.**



ಕಸಬಾ ಲಿಂಗಸಗೂರು ಗ್ರಾಮದಲ್ಲಿ ಇದ್ದುಕೊಂಡು ಶ್ರದ್ದೆಯಿಂದ ವಿದ್ಯಾಭ್ಯಾಸ ಮಾಡಿ 506 ಅಂಕಗಳು ತೆಗೆದುಕೊಂಡಿದ್ದು,ನಿತ್ಯ ಅಭ್ಯಾಸದಲ್ಲಿ ತೊಡಗಿರುವುದರಿಂದ ಸಾಧನೆ ಮಾಡಿದ್ದಾಳೆ ಎಂದು ತಂದೆ ಪತ್ರಕರ್ತರ ರಾಜೇಶ್ ಮಾಣಿಕ್ ಹರ್ಷ ವ್ಯಕ್ತಪಡಿಸಿದ್ದಾರೆ. ಈ ವಿದ್ಯಾರ್ಥಿನಿಯ ಸಾಧನೆಯಿಂದ ಕಾಲೇಜಿಗೂ ಹಾಗೂ ಕುಟುಂಬಕ್ಕೂ ಒಳ್ಳೆಯ ಕೀರ್ತಿ ತಂದಿದ್ದಾಳೆಂದು ಉಮಾ ಮಹೇಶ್ವರಿ ಕಾಲೇಜಿನ ಆಡಳಿತಾಧಿಕಾರಿ ವಿನಯಕುಮಾರ ಗಣಚಾರಿ,ಕಾಲೇಜಿನ ಪ್ರಾಂಶಪಾಲರು ಜಿ.ವಿ.ಸುರೇಶ ಸೇರಿ ಹಲವರು ಅಭಿನಂದನೆ ತಿಳಿಸಿದ್ದಾರೆ.

## ರೈಲ್ವೇ ಹಳಿಯ ಮದ್ಯೆ ಅಪರಿಚಿತ ಗಂಡಸ್ಸು ಆತ್ಮಹತ್ಯೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ರೈಲ್ವೇ ನಿಲ್ದಾಣದ ವೇದಿಕೆ ಸಂಖ್ಯೆ 02 ರ ಹತ್ತಿರ ಡೌನ್‌ಮೇನ್ ಲೈನ್ ರೈಲುಹಳಿಯ ಮದ್ಯೆ ಸುಮಾರು 25 ವರ್ಷದ ಅಪರಿಚಿತ ಗಂಡಸ್ಸು ಯಾವುದೋ ಚಲಿಸುವ ರೈಲು ಗಾಡಿಗೆ ಅಡ್ಡ ಮಲಗಿ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟಿದ್ದು, ಈ ಕುರಿತು ರೈಲ್ವೇ ಪೊಲೀಸ್ ಠಾಣೆಯಲ್ಲಿ ಯು.ಡಿ.ಆರ್ ನಂ 13/2026 ಯು/ಎಸ್ 194 ಬಿಎನ್‌ಎಸ್‌ಎಸ್ ರಿತ್ಯಾ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಠಾಣೆಯ ಅಧಿಕಾರಿಗಳು ತಿಳಿಸಿದ್ದಾರೆ.**

ಮೃತದೇಹ ದೊರೆತ ಘಟನಾ ಸ್ಥಳಗಳಲ್ಲಿ ಮೃತನ ವಾರಸುದಾರರು ಯಾರು ಪತ್ತೆಯಾಗಿರುವುದಿಲ್ಲ. ಮೃತನ ವಾರುಸುದಾರ ಪತ್ತೆ ಹಾಗೂ ಪಿ.ಎಂ.ಇ. ಸಲುವಾಗಿ ಮೃತದೇಹಗಳನ್ನು ರಾಯಚೂರು ರೀಮ್ಸ್ ಆಸ್ಪತ್ರೆಯ ಶೀತಲ ಶವಗಾರದಲ್ಲಿ ಇಡಲಾಗಿದೆ.



ಅಪರಿಚಿತ ಗಂಡಸ್ಸು ವಯಸ್ಸು ಸುಮಾರು 25 ವರ್ಷ, ಎತ್ತರ ಸುಮಾರು 5.2 ಅಡಿ, ಗೋಧಿ ಮೈ ಬಣ್ಣ, ದುಂಡು ಮುಖ, ದಪ್ಪ ಮೂಗು, ಕಪ್ಪು ಕಣ್ಣುಗಳು, ತಲೆಯಲ್ಲಿ 2 ಇಂಚು ಕಪ್ಪು ಕೂದಲು, ಚಿಗರು ಗಡ್ಡ ಮೀಸೆ ಬಿಟ್ಟಿದ್ದು, ಸಾಧಾರಣ ಶರೀರ ಹೊಂದಿರುತ್ತಾನೆ.

ಒಂದು ತಿಳಿ ಗುಲಾಬಿ ಬಣ್ಣದ ರೆಡಿಮೇಡ್ ಶರ್ಟು, ಒಂದು ಒಂದು ನೀಲಿ ಬಣ್ಣದ ಜೀನ್ಸ ಪ್ಯಾಂಟ್, ಒಂದು ಬೂದು ಬಣ್ಣ ಚಡ್ಡಿ, ಕೆಂಪು ಬಣ್ಣದ ಉಡದಾರ ಧರಿಸಲಾಗಿದೆ. ಮೃತನ ವಾರಸುದಾರರು ಪತ್ತೆಯಾದಲ್ಲಿ ಅಥವಾ ಈ ಮೃತನ ಹೋಲಿಕೆಯ ಪುರುಷ ಕಾಣೆಯಾದ ಪ್ರಕರಣ ದಾಖಲಾಗಿದ್ದಲ್ಲಿ ರಾಯಚೂರು ರೈಲ್ವೇ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ: 08532-231716 ಅಥವಾ ಮೊಬೈಲ್ ಸಂಖ್ಯೆ: 9480802111 ಅಥವಾ ರೈಲ್ವೆ ಪೊಲೀಸ್ ಕಂಟ್ರೋಲ್ ರೂಂ: 080-22871291ಗೆ ಸಂಪರ್ಕ ಮಾಡಬಹುದಾಗಿದೆ ಎಂದು ರಾಯಚೂರು ರೈಲ್ವೇ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತುರ್ವಿಹಾಳ ಪಟ್ಟಣ ಪಂಚಾಯತ: ವೈಯಕ್ತಿಕ ಚಟುವಟಿಕೆಗಳಿಗೆ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ತುರ್ವಿಹಾಳ ಪಟ್ಟಣ ಪಂಚಾಯತ ವತಿಯಿಂದ 2026-27ನೇ ಸಾಲಿನ ಎಸ್.ಎಫ್.ಸಿ. ಶೇ.7.25 ಇತರೆ ಬಡಜನರ ಕಲ್ಯಾಣಕ್ಕಾಗಿ ಮತ್ತು ಶೇ.5 ವಿಕಲಚೇತನರಿಗಾಗಿ ಯೋಜನೆಗೆ ಕಾಯ್ದಿರಿಸಲಾದ ಎಸ್.ಎಫ್.ಸಿ. ಮುಕ್ತ ನಿಧಿ ಅನುದಾನ ಅನುಷ್ಠಾನಕ್ಕಾಗಿ ವೈಯಕ್ತಿಕ ಚಟುವಟಿಕೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**



2026-27 ನೇ ಸಾಲಿನ ಎಸ್ ಎಫ್ ಸಿ 7.25% ಇತರೆ ಬಡ ವರ್ಗದವರಿಗೆ ಶಸ್ತ್ರ ಚಿಕಿತ್ಸೆಗೆ ಒಳಗಾಗಿರುವ ರೋಗಿಗಳಿಗೆ ಧನ ಸಹಾಯಕ್ಕೆ ನಿಗದಿತ ಅರ್ಜಿ ನಮೂನೆ 2025-26ನೇ ಸಾಲಿನೊಳಗೆ ಶಸ್ತ್ರ ಚಿಕಿತ್ಸೆಗೊಳಗಾದ ದಾಖಲಾತಿಗಳು (ವೈದ್ಯಾಧಿಕಾರಿಗಳಿಂದ ದೃಡೀಕರಣ ಪ್ರಮಾಣ ಪತ್ರ) ಆಧಾರ ಕಾರ್ಡ್, ರೇಷನ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಬ್ಯಾಂಕ್ ಪಾಸ್ ಬುಕ್ ಝೆರಾಕ್ಸ್ ಪ್ರತಿ ಚುನಾವಣಾ ಗುರುತಿನ ಚೀಟಿ ಸಲ್ಲಿಸಬೇಕು. ವಿಕಲಾಂಗಚೇತನರು, ಪೋಲಿಯೋ ರೋಗಕೊಳ ಪಟ್ಟವರಿಗೆ ಕೃತಕ ಜೋಡಣೆಗೆ ತಗುಲುವ ಮೊತ್ತದ ಸಹಾಯಧನಕ್ಕೆ ನಿಗದಿತ ಅರ್ಜಿ ನಮೂನ,? ಅಂಗವಿಕಲ ಪ್ರಮಾಣ ಪತ್ರ, ವೈದ್ಯಾಧಿಕಾರಿಗಳಿಂದ ದೃಡೀಕರಣ ಪತ್ರ, ಆಧಾರ ಕಾರ್ಡ್, ರೇಷನ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ವಾಸಸ್ಥಳ ಪ್ರಮಾಣ ಪತ್ರ, ಚುನಾವಣೆ ಗುರುತಿನ ಚೀಟಿ, ಬ್ಯಾಂಕ್ ಪುಸ್ತಕ ಝೆರಾಕ್ಸ್ ಸಲ್ಲಿಸಬೇಕು.

2026-27ನೇ ಸಾಲಿನ ಎಸ್‌ಎಫ್‌ಸಿ ಯೋಜನೆಯಡಿ ಪರಿಶಿಷ್ಟ ಜಾತಿಯ ಎಸ್.ಎಸ್.ಎಲ್.ಸಿ ಉತ್ತೀರ್ಣವಾಗಿರುವ ವಿದ್ಯಾರ್ಥಿಗಳಿಗೆ ಪ್ರತ್ಸಾಹ ಧನಕ್ಕೆ 2025-26 ನೇ ಸಾಲಿನಲ್ಲಿ ಉತ್ತೀರ್ಣವಾದ ವಿದ್ಯಾರ್ಥಿಗಳು ಶಾಲೆಯ ದೃಡೀಕರಣ ಪತ್ರ, (ಪ್ರಸಕ್ತ ಸಾಲಿನ) ಶಾಲೆಯಲ್ಲಿ ಫೀ ತುಂಬಿದ ರಸೀದಿ, ಎಸ್.ಎಸ್.ಎಲ್.ಸಿ ಅಂಕಪಟ್ಟಿ ಝೆರಾಕ್ಸ್ ಪ್ರತಿ, ಪಡಿತರ ಚೀಟಿ, ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಪಾಸ್ ಫೋಟೊ, ಬ್ಯಾಂಕ್ ಪುಸ್ತಕ ಝೆರಾಕ್ಸ್ ಪ್ರತಿ, ವಾಸಸ್ಥಳ ಪ್ರಮಾಣ ಪತ್ರದೊಂದಿಗೆ ಏಪ್ರಿಲ್ 22ರ ಸಂಜೆ 5.30ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಕೊನೆಯ ದಿನಾಂಕ ಮೀರಿ ಬಂದಂತಹ ಯಾವುದೇ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ವಿಳಾಸ: http://www.itstaffulbturvihal.co.in ನಲ್ಲಿ ಈ ಮಾಹಿತಿಯನ್ನು ಡೌನ್‌ಲೋಡ್ ಮಾಡಿಕೊಂಡು ವಿವರ ಪಡೆದುಕೊಳ್ಳಬಹುದಾಗಿದೆ ಎಂದು ತುರ್ವಿಹಾಳ ಪಟ್ಟಣ ಪಂಚಾಯತ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.